ಐಕ್ಯರಂಗ

ವಾರಪತ್ರಿಕೆ

ಭಾರತಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 22 ಮೇ 27, 1984 ಬೆಲೆ ಪೈಸೆ 60

ಸಿಐಟಿಯು ಕರ್ನಾಟಕ ರಾಜ್ಯ ನಾಲ್ಕನೆಯ ಸಮ್ಮೇಳನ

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಯನ್ನು ಸೋಲಿಸಿ

— ಬಿ. ಟಿ. ರಣದಿವೆ ಕರೆ

ಸಿಐಟಿಯು ಕರ್ನಾಟಕ ರಾಜ್ಯ ಮೂರನೆಯ ಸಮ್ಮೇಳನ ಮೂರು ವರ್ಷಗಳ ಹಿಂದೆ ಹರಿಹರದಲ್ಲಿ ನಡೆದ ನಂತರ ಸಾಧಿಸಿರುವ ಪ್ರಗತಿಯ ಬಗ್ಗೆ, ನಡೆಸಿರುವ ಹೋರಾಟಗಳು, ಸದಸ್ಯರು ಕಾರ್ಯಕರ್ತರು ಮುಖಂಡರು ಅನುಭವಿಸಿರುವ ಸಂಕಷ್ಟಗಳನ್ನು ಸಿಐಟಿಯು ಅಧ್ಯಕ್ಷ ಬಿ. ಟಿ. ರಣದಿವೆ ಯವರು ಗಮನಿಸಿ ಅವರು ಈ ಪ್ರಗತಿಗಾಗಿ ರಾಜ್ಯದ ಮುಖಂಡತ್ವದ ಬೆನ್ನು ತಟ್ಟಿದರು. ಸಂದರ್ಭ 17-5-84 ರಂದು ಮಂಗಳೂರಿನಲ್ಲಿ ನಡೆದ ಸಿಐಟಿಯು ನಾಲ್ಕನೆಯ ಸಮ್ಮೇಳನದ ಕೊನೆಯ ದಿನದ ಸಮಾರೋಪ ಭಾಷಣ.

ಮೇ 14 ರ ಬೆಳಿಗ್ಗೆ 11 ಗಂಟೆಗೆ ಬಿ. ಕೊರಗಪ್ಪರೈ ನಗರದಲ್ಲಿ ಧ್ವಜಾರೋಹಣದೊಂದಿಗೆ ನಾಲ್ಕನೆಯ ಸಮ್ಮೇಳನ ಪ್ರಾರಂಭವಾಯಿತು. ಮಂಗಳೂರಿನ ಪುರ ಭವನದಲ್ಲಿ ಮಧ್ಯಾಹ್ನ 1 ಗಂಟೆಗೆ ಬಿ. ಟಿ. ರಣದಿವೆ ಸಮ್ಮೇಳನವನ್ನು ಉದ್ಘಾಟಿಸಿದರು. ಎಸ್. ಸೂರ್ಯನಾರಾಯಣರಾವ್ ಅಧ್ಯಕ್ಷತೆ ವಹಿಸಿದ್ದರು. ಎಐಟಿಯುಸಿ ಯ ಪ್ರತಿನಿಧಿ ಎಚ್. ವಿ. ಅನಂತ ಸುಬ್ಬರಾವ್, ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯ ಸಂಚಾಲಕ ಮತ್ತು ಶಾಸಕ ಲೋಕಯ್ಯ ಶೆಟ್ಟಿಯವರು ಸಮ್ಮೇಳನಕ್ಕೆ ಶುಭ ಕೋರಿ ಮಾತನಾಡಿದರು.

ಸಂಜೆ 6 ಗಂಟೆಗೆ ಬಿ. ಕೊರಗಪ್ಪ ರೈ ನಗರದಲ್ಲಿ ಮುಂದುವರೆದ ಸಮ್ಮೇಳನದಲ್ಲಿ ಸಿ. ನಂಜುಂಡಪ್ಪನವರು ಪ್ರಧಾನ ಕಾರ್ಯದರ್ಶಿಯ ವರದಿಯನ್ನು ಮಂಡಿಸಿದರು. ಇಂದಿನ ಅಂತರರಾಷ್ಟ್ರೀಯ ಪರಿಸ್ಥಿತಿ -ಮುಖ್ಯವಾಗಿ ರೀಗನ್ ಆಡಳಿತದಿಂದ ಪರಮಾಣು ಯುದ್ಧದ ಅಪಾಯ ಹೆಚ್ಚಿರುವುದು, ಲೋಕದಲ್ಲಿ ನಡೆಯುತ್ತಿರುವ ಶಾಂತಿ ಚಳುವಳಿ, ಕಾಂಗ್ರೆ ಕೇಂದ್ರ ಸರ್ಕಾರವು ಅಧಿಕಾರ ಶಾಹಿ ಪಥದಲ್ಲಿ ಮುಂದುವರಿಯುತ್ತಿರುವುದು, ಸಂಸದೀಯ ಪ್ರಜಾಪ್ರಭುತ್ವದ ಸ್ಥಾನದಲ್ಲಿ ಅಧ್ಯಕ್ಷೀಯ ಮಾದರಿಯ ಸರ್ಕಾರವನ್ನು ತರುವ ಪ್ರಯತ್ನ, ಪಶ್ಚಿಮ ಬಂಗಾಳ ಮತ್ತು ತ್ರಿಪುರ ಎಡರಂಗ ಸರ್ಕಾರಗಳ ವಿಜಯಗಳು ಮತ್ತು ಸಾಧನೆಗಳು, 1983 ಜನವರಿ 5 ರ ವಿಧಾನ ಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ (ಐ) ಸೋಲು, ಕರ್ನಾಟಕದಲ್ಲಿ ನಡೆದ ಪುರಸಭಾ ಚುನಾವಣೆಗಳು, ದೇಶದ ಆರ್ಥಿಕ ಬಿಕ್ಕಟ್ಟು, ನಡೆದಿರುವ ಚಳುವಳಿ ಹೋರಾಟಗಳು, ದುಡಿಯುವ ಮಹಿಳೆಯರ ಸಮಸ್ಯೆಗಳು, ನ್ಯೂನತೆಗಳು ಮತ್ತು ಕರ್ತವ್ಯಗಳು– ಈ ಅಂಶಗಳು ವರದಿಯಲ್ಲಿ ಅಡಕವಾಗಿದ್ದುವು. 55 ಪ್ರತಿನಿಧಿಗಳು ಈ ವರದಿಯನ್ನು ಚರ್ಚಿಸಿದ ನಂತರ, ಕೆಲವು ತಿದ್ದುಪಡಿಗಳೊಂದಿಗೆ ವರದಿಯನ್ನು ಸಮ್ಮೇಳನವು ಅಂಗೀಕರಿಸಿತು.

15 ಮತ್ತು 16 ರಂದು ಸಿಐಟಿಯು ಕೇರಳ ರಾಜ್ಯ ಸಮಿತಿಯ ಅಧ್ಯಕ್ಷ ಸಿ. ಕಣ್ಣನ್, ಅಖಿಲ ಭಾರತ ಅಂಚೆ ನೌಕರರ ಸಂಘ-ಪೋಸ್ಟ್‌ಮನ್ ಮತ್ತು ನಾಲ್ಕನೆಯ ದರ್ಜೆ ನೌಕರರು –ಈ ಸಂಸ್ಥೆಯ ಕರ್ನಾಟಕ ವಲಯ ಅಧ್ಯಕ್ಷ ಎ. ಜಯರಾಮ್, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ನೌಕರರ ಸಂಘದ ಕೇಂದ್ರ ಸಮಿತಿಯ ಸದಸ್ಯ ವಾಸುದೇವ ಬೋಳೂರು, ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಯು. ಜನಾರ್ಧನ ನಾಯಕ್, ಭಾರತದ ಪ್ರಜಾಸತ್ತಾತ್ಮಕ ಯುವಜನ ಒಕ್ಕೂಟದ ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಎಸ್. ಶಿವರಾಂ. ಭಾರತ ವಿದ್ಯಾರ್ಥಿ ಒಕ್ಕೂಟದ [ಎಸ್ ಎಫ್ ಐ] ಕರ್ನಾಟಕ ರಾಜ್ಯ ಸಮಿತಿಯ ಅಧ್ಯಕ್ಷ ಆರ್. ಜಯಕುಮಾರ್ ಸಮ್ಮೇಳನದಲ್ಲಿ ಮಾತನಾಡಿ ಶುಭ ಕೋರಿದರು.

ದೆಹಲಿ, ಬಿಹಾರ, ಒರಿಸ್ಸ ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ಸಿಐಟಿಯು ರಾಜ್ಯ ಸಮಿತಿಗಳಿಂದ, ಆಲ್ ಇಂಡಿಯ ಇನ್ಶೂರೆನ್ಸ್ ಎಂಪ್ಲಾಯೀಸ್ ಅಸೋಸಿಯೇಷನ್, ಆಲ್ ಇಂಡಿಯಾ ರೋಡ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಫೆಡರೇಷನ್, ಆಲ್ ಇಂಡಿಯಾ ಆರ್ ಎಂ ಎಸ್ ಮತ್ತು ಎಂ ಎಂ ಎಸ್ ಕರ್ನಾಟಕ ವಲಯ ಕಾರ್ಯದರ್ಶಿ, ಸಿಂಡಿಕೇಟ್ ಬ್ಯಾಂಕ್ ಸ್ಟಾಫ್ ಯೂನಿಯನ್‌ನಿಂದ ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರಿಂದ ಸಮ್ಮೇಳನಕ್ಕೆ ಶುಭ ಸಂದೇಶಗಳು ಬಂದಿದ್ದುವು.

ಸಮ್ಮೇಳನವು ನಮ್ಮ ರಾಜ್ಯದ ಕಾರ್ಮಿಕರ ಸಮಸ್ಯೆಗಳನ್ನು ಚರ್ಚಿಸಿ 26 ಕೈ ಗಾರಿಕೆಗಳಲ್ಲಿರುವ 70 ಲಕ್ಷ ಕ್ಕಿಂತಲೂ ಹೆಚ್ಚು ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ಪ್ರಕಟಿಸುವುದರಲ್ಲಿ ಆಗುತ್ತಿರುವ ವಿಳಂಬವನ್ನು ಖಂಡಿಸಿ, ಮಾಲೀಕರ ಪರವಾದ ಮತ್ತು ಕಾರ್ಮಿಕರ ವಿರುದ್ಧವಾದ ಧೋರಣೆಯನ್ನು ಅನುಸರಿಸುತ್ತಿರುವ ಕಾರ್ಮಿಕ ಸಚಿವ ಅಜೀಜ್ ಸೇಠ್‌ರನ್ನು ಸಚಿವ ಸಂಪುಟದಿಂದ ಹೊರ ಹಾಕ ಬೇಕು, ಇಲ್ಲವೇ ಬೇರೆ ಮುಖ್ಯವಲ್ಲದ ಇಲಾಖೆಯನ್ನು ಕೊಡ ಬೇಕು ಎಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಲು ತೀರ್ಮಾನಿಸಿತು. ಕನಿಷ್ಠ ಕೂಲಿ ಸಲಹಾ ಸಮಿತಿಯು ಶಿಫಾರಸು ಮಾಡಿರುವ ಕನಿಷ್ಠ ಕೂಲಿಯ ದರಗಳನ್ನು ರಾಜ್ಯ ಸರ್ಕಾರವು ಕೂಡಲೇ ಪ್ರಕಟಿಸಬೇಕೆಂದು, ಒತ್ತಾಯ ಪಡಿಸಲು, ಬಡ ರೈತರು ಸಾಗುವಳಿ ಮಾಡುತ್ತಿರುವ ಸರ್ಕಾರಿ ಭೂಮಿಯಿಂದ ಅವರನ್ನು ಒಕ್ಕಲೆಬ್ಬಿಸಲು ಸರ್ಕಾರದ ಪ್ರಯತ್ನಗಳನ್ನು ವಿರೋಧಿಸಿ ವಸತಿಹೀನರಿಗೆ ನೈವೇಶನಗಳನ್ನು ಮತ್ತು ಬಡರೈತರಿಗೆ ಪಟ್ಟಾಗಳನ್ನೂ ಕೂಡಲೇ ಕೊಡಬೇಕೆಂದು ಆಗ್ರಹ ಪಡಿಸಲು

(ಕೊನೆಯ ಪುಟ ನೋಡಿ)

ಪಿ. ಸುಂದರಯ್ಯ ಮತ್ತು ಪಿ. ರಾಮಮೂರ್ತಿ ಆರೋಗ್ಯ ಸುಧಾರಣೆ

ಸಿ. ಪಿ. ಐ. (ಎಂ.) ನ ಕೇಂದ್ರ ಸಮಿತಿ ಸದಸ್ಯರೂ ಆಂಧ್ರ ಪ್ರದೇಶ ರಾಜ್ಯ ಸಮಿತಿಯ ಕಾರ್ಯದರ್ಶಿಗಳೂ ಆಗಿರುವ ಕಾಂ. ಪಿ. ಸುಂದರಯ್ಯ ಅವರು ಮೂತ್ರಕೋಶದ ತೊಂದರೆಗಾಗಿ ಮದ್ರಾಸಿನ ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಅವರಸ್ಥಿತಿ ಕೊಂಚ ಮಟ್ಟಿಗೆ ಸುಧಾರಿಸಿರುವುದಾಗಿ ತಿಳಿದು ಬಂದಿದೆ.

ಸಿ. ಪಿ. ಐ. (ಎಂ) ನ ಪೊಲಿಟ್ ಬ್ಯೂರೋ ಸದಸ್ಯರಾಗಿರುವ ಕಾಂ. ಪಿ. ರಾಮಮೂರ್ತಿ ಅವರನ್ನು ಪ್ರೊಸ್ಟ್ರೇಟ್ ಗ್ರಂಥಿಯ ಶಸ್ತ್ರ ಚಿಕಿತ್ಸೆಗಾಗಿ ಬೆಂಗಳೂರಿನ ಸೇಂಟ್ ಫಿಲೋಮಿನಾಸ್ ಆಸ್ಪತ್ರೆಗೆ ಸೇರಿಸಲಾಗಿದ್ದು ಕಳೆದ 11ನೇ ತಾರೀಕು ಅವರು ಶಸ್ತ್ರಕ್ರಿಯೆಗೊಳಗಾಗಿದ್ದರು. ಒಂದೆರಡು ದಿವಸಗಳ ಮಟ್ಟಿಗೆ ಅರೆ ಪ್ರಜ್ಞಾವಸ್ಥೆಯಲ್ಲಿದ್ದ ಅವರು ಈಗ ಚೇತರಿಸಿಕೊಂಡಿದ್ದಾರೆ.

ಭಿವಂಡಿ- ಗಲಭೆ, ಕೊಲೆಗಳಿಗೆ ಸರ್ಕಾರವೇ ಹೊಣೆ

— ಪೊಲಿಟ್ ಬ್ಯೂರೋ

ಭಿವಂಡಿಯಲ್ಲಿ ನಡೆದ ಭೀಬತ್ಸಕರ ಹಾಗೂ ಸಾಮೂಹಿಕ ಕೊಲೆಗಳನ್ನು ಮುಂಬೈ ನಗರದಲ್ಲಿ ನಡೆದ ದೊಂಬಿಕೊಲೆಗಳನ್ನು ಸಿ. ಪಿ. ಐ. [ಎಂ] ನ ಪೊಲಿಟ್ ಬ್ಯೂರೋ ಖಂಡಿಸಿದೆ.

ವಸಂತ ದಾದಾ ಪಾಟೀಲ್ ನೇತೃತ್ವದ ಕಾಂಗ್ರೆಸ್ [ಐ] ಮಂತ್ರಿ ಮಂಡಲವನ್ನು ಮೇಲಿನ ಘಟನೆಗಳ ಕಾರಣಕ್ಕಾಗಿ ದೋಷಾ ರೋಪಣೆಗೆ ಗುರಿಮಾಡಲೇ ಬೇಕಾಗಿದೆ. ಏಕೆಂದರೆ ದೊಂಬಿ ಮತ್ತು ಕೊಲೆಗಳಿಗಾಗಿ ನಡೆಯುತ್ತಿದ್ದ ಪೂರ್ವ ಸಿದ್ಧತೆಗಳನ್ನು ಕುರಿತು ರಾಜಕೀಯ ಪಕ್ಷಗಳು ಸಾರ್ವ ಜನಿಕವಾಗಿ ಸರ್ಕಾರವನ್ನು ಎಚ್ಚರಿಸುತ್ತಿದ್ದರೂ ಸಹ ಸಮಾಜ ಘಾತುಕರ ಒಳಸಂಚಿಗೆ ಸರ್ಕಾರ ಕುರುಡಾಗಿ ಅದನ್ನು ಪೂರ್ಣವಾಗಿ ನಿರ್ಲಕ್ಷಿಸಿದ್ದು ಅಪ್ರತ್ಯಕ್ಷವಾಗಿ ಗಲಭೆ ಕೋರರಿಗೆ ಕುಮ್ಮಕ್ಕು ನೀಡಿದಂತಾಗಿದೆ ಎಂದು ಪೊಲಿಟ್ ಬ್ಯೂರೋ ಅಭಿಪ್ರಾಯ ಪಟ್ಟಿದೆ.

ದೊಂಬಿಯು ಪ್ರಾರಂಭವಾದದ್ದು ಶಿವಸೇನೆಯು ಬಲಾತ್ಕಾರದ "ಬಂದ್" ನಡೆಸಿದಾಗ. ಇಂಥ ಘಟನೆಗಳಲ್ಲಿ ಶಿವಸೇನೆಯು ಒಳಗೊಳ್ಳುತ್ತಿರುವುದು ಇದೇ ಮೊದಲ ಸಲ ವೇನಲ್ಲ. ಆದರೆ ಕಾಂಗ್ರೆ ಸರಕಾರಗಳು ಈ ಸಂಘಟನೆಯೊಂದಿಗೆ ಸ್ನೇಹವಿರಿಸಿಕೊಂಡು ಕಾರ್ಮಿಕ ವರ್ಗದ ಚಳವಳಿಗೆ ವಿರುದ್ಧವಾಗಿ ಮತ್ತು ಭಾಷಾ, ಧಾರ್ಮಿಕ ಅಲ್ಪ ಸಂಖ್ಯಾತರ ವಿರುದ್ಧ ಭಯೋತ್ಪಾದನೆಗಾಗಿ ಬಳಸಿಕೊಳ್ಳುತ್ತಿರುವುದು ತಿಳಿದ ವಿಷಯವೇ ಆಗಿದೆ.

ಮಹಾರಾಷ್ಟ್ರದ ಮುಖ್ಯಮಂತ್ರಿ ಶಿವಸೇನೆಯ ಕೋಮುವಾದಿಗಳ ವಿರುದ್ಧ ಕ್ರಮ ಕೈಗೊಳ್ಳಲು ನಿರಾಸಕ್ತಿ ತೋರಿಸಿದ್ದಾರೆ ಮತ್ತು ಪತ್ರಿಕಾ ವರದಿಗಳ ಪ್ರಕಾರ ಘಟನೆಯ ಕುರಿತು ನ್ಯಾಯಾಂಗ ತನಿಖೆ ನಡೆಸಲು ನಿರಾಕರಿಸಿದ್ದಾರೆ.

ಕಾಂಗ್ರೆ ಸರ್ಕಾರ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಜನತೆಯ ಜೀವ ಹಾಗೂ ಆಸ್ತಿಗಳನ್ನು ರಕ್ಷಿಸಲು ಅಸಮರ್ಥವಾಗಿದೆ ಎಂಬುದನ್ನು ಇದು ತೋರಿಸಿಕೊಟ್ಟಿದೆ. ಪ್ರಜಾಸತಾತ್ಮಕ ಶಕ್ತಿಗಳು ಈ ಸರ್ಕಾರದಲ್ಲಿ ತಮ್ಮ ವಿಶ್ವಾಸವನ್ನು ಕಳೆದುಕೊಂಡಿವೆ ಮತ್ತು ರಾಜೀನಾಮೆ ಕೊಡಬೇಕೆಂದು ಒತ್ತಾಯಿಸಿದೆ.

ರಾಜ್ಯದಲ್ಲಿ ತನ್ನ ಬಾಹುಗಳನ್ನು ಚಾಚುತ್ತಿರುವ ಕೋಮುವಾದಿ ಶಕ್ತಿಗಳ ವಿರುದ್ಧ ಜನತೆಯನ್ನು ಬಡಿದೆಬ್ಬಿಸಿ ಅಲ್ಪಸಂಖ್ಯಾತರ ರಕ್ಷಣೆಗೆ ಧಾವಿಸುವಂತೆ ಮಾಡಬೇಕೆಂದು ಸಿ. ಪಿ. ಐ. [ಎಂ] ನ ಪೊಲಿಟ್ ಬ್ಯೂರೋ ಪ್ರಜಾ ಪ್ರಭುತ್ವ ಹಾಗೂ ಜಾತ್ಯಾತೀತ ಶಕ್ತಿಗಳಿಗೆ ಕರೆ ನೀಡಿದೆ.

ರಾಜ್ಯಾದ್ಯಂತ ಸ್ಫೂರ್ತಿದಾಯಕ 'ಮೇ ದಿನಾಚರಣೆಗಳು'

ಐಕ್ಯರಂಗದ 20 5 84ರಸಂಚಿಕೆ ಪ್ರಕಟ ವಾಗಿಲ್ಲವಾದ ಕಾರಣ ರಾಜ್ಯದ ವಿವಿಧ ಭಾಗಗಳಿಂದ ಬಂದಿರುವ ಮೇ ದಿನವನ್ನು ಆಚರಿಸಿದ ವರದಿಗಳನ್ನು ಕೆಳಗೆ ಸಂಗ್ರಹಿಸಿ ಕೊಡಲಾಗಿದೆ.

ಬೆಂಗಳೂರು

ಅಂತರ್ರಾಷ್ಟ್ರೀಯ ಕಾರ್ಮಿಕ ದಿನವಾದ ಮೇ 1 ರಂದು ಬೆಂಗಳೂರಿನಲ್ಲಿ ಬೃಹತ್ ಮೆರವಣಿಗೆ, ಬಹಿರಂಗ ಸಭೆಯನ್ನು ನಡೆಸಲಾಯಿತು. ಸಿ. ಐ. ಟಿ. ಯು. ಎ.ಐ.ಟಿ.ಯು.ಸಿ. ಬ್ಯಾಂಕ್ ನೌಕರರು ಜೀವವಿಮಾ ನೌಕರರು, ಹೋಟೆಲ್ ಕಾರ್ಮಿಕರು, ಮತ್ತಿತರ ಕೈಗಾರಿಕೆಗಳ ಸಾವಿರಾರು ಕಾರ್ಮಿಕ ಬಂಧುಗಳು ಮೇ 1 ರಂದು ನಗರದ ಯಶವಂತಪುರ, ಕೃಷ್ಣ ರಾಜ ಪುರ, ಮೈಸೂರು ರಸ್ತೆ ಮತ್ತು ಸಿಲ್ವರ್ ಜ್ಯೂಬಿಲಿ ಪಾರ್ಕ್ ಗಳಿಂದ ಮೆರವಣಿಗೆ ಹೊರಟು ಸಂಜೆ 6 ಗಂಟೆಗೆ ಚಿಕ್ಕ ಲಾಲ್ ಬಾಗ್ ತಲುಪಿದರು. ಅಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಸಿ. ಐ. ಟಿ ಯು. ನ ಕಾ॥. ಎಸ್. ಸೂರ್ಯ ನಾರಾಯಣ ರಾವ್, ಎ. ಐ. ಟಿ. ಯು. ಸಿ. ಯ ಕಾ ಹೆಚ್. ವ.ಹದೇವನ್ ಮತ್ತು ಬಾಬು ಮ್ಯಾಥ್ಯೂ ಮಾತನಾಡಿದರು. ಸಿ.ಐ.ಟಿ.ಯು.ನ ಕಾ. ಟಿ. ಎಸ್. ಅನಂತರಾಮ್ ಅಧ್ಯಕ್ಷತೆ ವಹಿಸಿದರು. ಕೊನೆಯಲ್ಲಿ ಡಿ. ವೈ. ಎಫ್. ಐ. ಕಲಾವಿದರಿಂದ ಒಂದು ಕಿರು ನಾಟಕ ಮತ್ತು ಹಾಡುಗಳ ಕಾರ್ಯಕ್ರಮ ನಡೆಯಿತು. ಪೋಸ್ಟರುಗಳ ಪ್ರದರ್ಶನ, ಪುಸ್ತಕಗಳ ಮಾರಾಟ ನಡೆದವು.

ಮೈಸೂರು

ಮೇ ದಿನವನ್ನು ಉತ್ಸಾಹದ ವಾತಾವರಣದಲ್ಲಿ ಆಚರಿಸಲಾಯಿತು. ಸಿ.ಐ.ಟಿ.ಯು. ಎ.ಐ.ಟಿ.ಯು.ಸಿ. ಮತ್ತು ಇತರ ಕೇಂದ್ರೀಯ ನೌಕರರ ಒಕ್ಕೂಟಗಳು ಜಂಟಿಯಾಗಿ ಮೇ ದಿನವನ್ನು ಆಚರಿಸಿದವು.

ಜೀವರಾಯನ ಕಟ್ಟೆಯಿಂದ ಕಾರ್ಮಿಕರ ಬೃಹತ್ ಮೆರವಣಿಗೆ ನಗರದ ಮುಖ್ಯ ಬೀದಿಗಳಲ್ಲಿ ಸಂಚರಿಸಿ ಪುರಭವನದ ಮೈದಾನದಲ್ಲಿ ಸಮಾವೇಶಗೊಂಡಿತು.

ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಸಿಐಟಿಯು ನ ಕಾ. ಎಂ. ಎನ್. ಉಗ್ರಪ್ಪ. ಕಾ. ಮೋಹನ್ ಕುಮಾರ್, ಎ.ಐ.ಟಿ.ಯು.ಸಿ. ಯ ಕಾ. ಶಾಮಸುಂದರ್, ಕೆ. ವೆಂಕಟರಾಮಯ್ಯ, ವಿಮಾನೌಕರರ ಸಂಘದ ಪರವಾಗಿ ಕಾ. ಎಸ್. ವಿ. ಅನಂತ ಸುಬ್ಬರಾವ್, ಅಂಚೆ ಮತ್ತು ತಂತಿ ನೌಕರರ ಪರವಾಗಿ ಕಾ. ಜಿ. ಕೆ. ಲಕ್ಷ್ಮೀನಾರಾಯಣ, ವಿಕ್ರಾಂತ್ ಟೈರ್ಸ್ ಕಾರ್ಮಿಕರ ಸಂಘದ ಅಧ್ಯಕ್ಷ ಕಾ. ಕೃಷ್ಣ ಮುಂತಾದವರು ಮಾತನಾಡಿದರು

ದಾಂಡೇಲಿ

ದಾಂಡೇಲಿಯ ಫೆರೋ ಅಲಾಯ್ಸ್, ಪ್ಲೈವುಡ್, ಹಾಗೂ ಪೇಪರ್ ಮಿಲ್ಲಿನ ಕಾರ್ಮಿಕರು ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ನಂತರ ನಡೆದ ಬಹಿರಂಗ ಸಭೆಯಲ್ಲಿ ಪುರಸಭಾ ಅಧ್ಯಕ್ಷರಾದ ಕಾ.ಟಿ.ಎಸ್. ನಾಯಕ್, ಕಾ. ಮಂಜುನಾಥ ಪುಲಕರ್, ಉಮೇಶ್ ನಾಯಕ್, ಅಕ್ರಮಖಾನ್, ಟಿ ಟಿ. ನಾಯಕ್ ಮಾತನಾಡಿದರು. ಸಭೆಯಲ್ಲಿ ಸಿಹಿ ಹಂಚಲಾಯಿತು.

ಉಡುಪಿ

ವಿವಿಧ ಕಾರ್ಮಿಕ ಸಂಘಗಳು ಜಂಟಿಯಾಗಿ ಮೇ ದಿನವನ್ನು ಆಚರಿಸಿದವು. ವಿವಿಧ ಭಾಗಗಳಿಂದ ಬಂದ ಮೆರವಣಿಗೆಗಳು ನಗರ ಸಭೆಯ ಬಳಿ ಒಟ್ಟುಗೂಡಿ ಅಲ್ಲಿಂದ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದವು. ನಂತರ ರಥ ಬೀದಿಯಲ್ಲಿ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾ. ಡೇವಿಡ್ ಕರ್ಕಡ ವಹಿಸಿದ್ದರು. ಸಭೆಯಲ್ಲಿ ಕಾ. ಶಂಕರ್ ಸೆಟ್ಟಿಗಾರ್, ಗೋಪಾಲ ಕೃಷ್ಣ, ಪದ್ಮನಾಭ, ವಿಶ್ವನಾಥ ರೈ, ಕೆ. ದಾಸ ಸೇರಿಗಾರ್ ಮುಂತಾದವರು ಮಾತನಾಡಿ ಮೇ ದಿನದ ಮಹತ್ತ್ವವನ್ನು ವಿವರಿಸಿದರು. ಸಭೆಯ ಪ್ರಾರಂಭದಲ್ಲಿ ಕಾ. ಎಚ್. ವಿಠಲ ಸ್ವಾಗತಿಸಿದರು. ಕಾ. ಮೋನಪ್ಪ ಸಾಲಿಯಾನ್ ಧನ್ಯವಾದ ಸಲ್ಲಿಸಿದರು. ನಂತರ ನಾಟಕವನ್ನು ಪ್ರದರ್ಶಿಸಲಾಯಿತು.

ಭದ್ರಾವತಿ

ಸಿಐಟಿಯು ಮತ್ತು ಎಐಟಿಯುಸಿಗಳ ಜಂಟಿ ಆಶ್ರಯದಲ್ಲಿ ಮೇ ದಿನವನ್ನು ಆಚರಿಸಲಾಯಿತು ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾ. ನರಸಿಂಹೇಗೌಡರು ವಹಿಸಿದ್ದರು. ಮೇ ದಿನದ ಮಹತ್ವ ಕುರಿತು ಕಾ. ಪುಟ್ಟಸ್ವಾಮಿ ಮತ್ತು ಕಾ. ಮಾಯಣ್ಣ ಅವರು ಮಾತನಾಡಿದರು.

ಅಂಬಲಗಾ

ಗುಲ್ಬರ್ಗಾ ಜಿಲ್ಲೆಯ ಅಂಬಲಗಾದಲ್ಲಿ ಮೇ ದಿನವನ್ನು ಆಚರಿಸಲಾಯಿತು ರೈತರ, ವಿದ್ಯಾರ್ಥಿಗಳ ಬೃಹತ್ ಮೆರವಣಿಗೆ ಗ್ರಾಮದ ಮುಖ್ಯ ಬೀದಿಗಳಲ್ಲಿ ಸಂಚರಿಸಿ ಬಹಿರಂಗ ಸಭೆಯನ್ನು ನಡೆಸಿತು.

ಸಭೆಯನ್ನು ಉದ್ದೇಶಿಸಿ ಕಾ. ಮೇಘರಾಜ ಕಠಾರೆ, ಕಲ್ಲಪ್ಪ ಬೇಲಿ, ವೀರಭದ್ರಯ್ಯಸ್ವಾಮಿ ಮಾತನಾಡಿದರು. ಗ್ರಾಮದ ಹಿರಿಯ ರೈತರಾದ ಸಂಗಪ್ಪ ದುರ್ಗೆ ಅಧ್ಯಕ್ಷತೆ ವಹಿಸಿದ್ದರು.

ಮೆರವಣಿಗೆಯ ನೇತೃತ್ವವನ್ನು ಸುರೇಶ್ ಪಂಚಾಳ, ಬಸವರಾಜ ನೂರಡಗಿ, ಕಲ್ಲಪ್ಪ ಗುತ್ತಿ ವಹಿಸಿದ್ದರು.

ಬೀದರ್

ಬೀದರಿನಲ್ಲಿ ನಡೆದ ಮೇ ದಿನಾಚರಣೆಯಲ್ಲಿ ಲೋಕೋಪಯೋಗಿ, ಕಾರಂಜಿ ಯೋಜನೆ ಮತ್ತು ಕೃಷಿ ಕಾರ್ಮಿಕರು ಸೇರಿದಂತೆ 500 ಮಂದಿ ಮೆರವಣಿಗೆ ಬಹಿರಂಗ ಸಭೆ ನಡೆಸಿದರು. ಸಭೆಯನ್ನುದ್ದೇಶಿಸಿ ಜನತಾದ ಕಲ್ಯಾಣ ರಾವ್ ಮೊಳಕೇರಿ, ಸಿಪಿಐ (ಎಂ) ನ ಸುಂದರರಾಜ್, ಡಿವೈಎಫ್ಐ ನ ಸಂಗಶೆಟ್ಟಿ ಪಾಟೀಲ್, ಎಸ್ಎಫ್ಐ ನ ದತ್ತುಹೊನ್ನ ಪಿ.ಡಬ್ಲ್ಯು.ಡಿ. ಯ ಸಂಗ್ರಾಮ ಮುಂತಾದವರು ಮಾತನಾಡಿದರು. ಪ್ರಾರಂಭದಲ್ಲಿ ಅಗಲಿದ ಸಿಪಿಐ ಮುಖಂಡರಾದ ಕಾ. ಶ್ರೀನಿವಾಸ ಗುಡಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಹಾಸನ

ಹಾಸನದ ಕಾಫಿ ಕ್ಯೂರಿಂಗ್ ಸಮೀಪ ನಡೆದ ಬಹಿರಂಗ ಸಭೆಯಲ್ಲಿ ಮೇ ದಿನ ಆಚರಿಸಲಾಯಿತು ಇದರಲ್ಲಿ ಕಾಫಿ ಕ್ಯೂರಿಂಗ್ ಮತ್ತು ಇತರೆ ಕಾರ್ಮಿಕರು ಪಾಲ್ಗೊಂಡಿದ್ದರು.

ಸಭೆಯನ್ನುದ್ದೇಶಿಸಿ ಕಾ. ವಿ. ಸುಕುಮಾರ್ ಅವರು ಮಾತನಾಡಿ ಮೇ ದಿನದ ಮಹತ್ವವನ್ನು ಕಾರ್ಮಿಕರ ಕರ್ತವ್ಯಗಳನ್ನು ವಿವರಿಸಿದರು. ಡಿ.ವೈ. ಎಫ್. ಐ. ನ ಸಂಚಾಲಕರಾದ ಕಾ. ಸಿ. ಬೂದೇಶ್ ಅವರೂ ಮಾತನಾಡಿದರು. ಕಾ. ಹೊನ್ನೇಗೌಡ ಅಧ್ಯಕ್ಷತೆ ವಹಿಸಿದ್ದರು.

ಕುಂದಾಪುರ

ಹಂಚಿನ ಕಾರ್ಮಿಕರು, ಬೀಡಿ ಕಾರ್ಮಿಕರು, ರಿಕ್ಷಾ ಚಾಲಕರು, ಸಾರಿಗೆ ನೌಕರರು ಮತ್ತು ಕೃಷಿ ಕೂಲಿಗಾರರು ನಗರದ ವಿವಿಧ ಭಾಗಗಳಿಂದ ಮೆರವಣಿಗೆಯಲ್ಲಿ ಆಗಮಿಸಿ ಕುಂದಾಪುರದ ಶಾಸ್ತ್ರಿ ಪಾರ್ಕಿನ ಬಳಿ ಬಹಿರಂಗ ಸಭೆ ನಡೆಸಿದರು.

ಸಭೆಯಲ್ಲಿ ಕಾ. ಅಬ್ರಹಾಂ ಕರ್ಕಡ, ಕೆ. ಶಂಕರ್, ವಿ. ಮಹಾಬಲ, ಎಚ್. ನರಸಿಂಹ ಮಾತನಾಡಿದರು ಕಾ. ಸಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು.

ಶಿರಸಿ

ಮೇ ದಿನವನ್ನು ಶಿರಸಿಯಲ್ಲಿ ಆಚರಿಸಲಾಯಿತು. ಅಂದು ಸಿಪಿಐ (ಎಂ) ಕಚೇರಿಯಲ್ಲಿ ನಡೆದ ಸಭೆಯ ಅಧ್ಯಕ್ಷತೆಯನ್ನು ಪುರಸಭೆಯ ಉಪಾಧ್ಯಕ್ಷರಾದ ಶಂಕರ್ ಶಿರಸಿಕರ್ ವಹಿಸಿದ್ದರು.

ಸಭೆಯಲ್ಲಿ ಕಾ. ಎಂ. ಎಸ್. ಧಾರೇಶ್ವರ್, ಕಾ. ಪರಶುರಾಮ ಮತ್ತು ಪಿ. ಜಿ. ಮಶಾಲ್ದಿ ಅವರು ಮಾತನಾಡಿದರು. ●

ರಾಷ್ಟ್ರಪತಿಗೆ ಪತ್ರ ಬರೆದ ಶ್ರೀ ಅಜೀಜ್ ಸೇಠ್ ಕೃತ್ಯಕ್ಕೆ ಪಕ್ಷದ ಖಂಡನೆ

ಮಾರ್ಕ್ಸ್ ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿಯು ದಿನಾಂಕ : 4-5-1984 ಮತ್ತು 5-5-1984 ರಂದು ಕಾಂ. ಹಸನ್ ಖಾನ್ ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ರಾಜ್ಯದ ಇತ್ತೀಚಿನ ಪರಿಸ್ಥಿತಿಯನ್ನು ಚರ್ಚಿಸಿ ಈ ಕೆಳಗಿನ ನಿರ್ಣಯಗಳನ್ನು ಸ್ವೀಕರಿಸಿತು.

ಜನತಾ ಸರ್ಕಾರ ರಾಜ್ಯದಲ್ಲಿಯೇ ಮೊದಲ ಬಾರಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳು ರಾಜ್ಯದ ವಿದ್ಯಾರ್ಥಿಗಳಿಗೆ ಪೋಷಕರಿಗೆ ಮತ್ತು ತನ್ನ ಸಿಬ್ಬಂದಿಗೆ ಎಸಗುತ್ತಿರುವ ಅನ್ಯಾಯವನ್ನು ನಿಯಂತ್ರಿಸಲು, ಶಿಕ್ಷಣ ವಿಧೇಯಕದ ಮೂಲಕ ಮಾಡಿದ ಪ್ರಯತ್ನವನ್ನು ವಿಫಲಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ರಾಜ್ಯದ ವಿಧಾನ ಸಭೆಯಲ್ಲಿ, ವಿಧಾನ ಪರಿಷತ್ತಿನಲ್ಲಿ ಅಲ್ಪಸಂಖ್ಯಾತರಿಗೆ ಸಂವಿಧಾನದತ್ತ ರಕ್ಷಣೆ ನೀಡುವುದರ ಬಗ್ಗೆ ವಿವರವಾದ ಚರ್ಚೆಯಾಗಿ ಆ ನಿಟ್ಟಿನಲ್ಲಿ ಕೆಲವು ತಿದ್ದುಪಡಿಗಳೂ ಆಗಿರುತ್ತಾ, ಅಜೀಜ್ ಸೇಠ್ ರವರು ರಾಷ್ಟ್ರಪತಿಗೆ ಪತ್ರ ಬರೆಯುವುದರ ಮೂಲಕ ಶಾಂತವಾದ ಕೊಳಕ್ಕೆ ಕಲ್ಲೆಸೆದಿದ್ದಾರೆ. ಅಲ್ಪ ಸಂಖ್ಯಾತರ ರಕ್ಷಣೆಯ ವೀರನಾಗಲೆನಿಸಿರುವ ಅಜೀಜ್ ಸೇಠ್ ರವರು ನಿಜವಾಗಿ ರಕ್ಷಿಸ ಬಯಸಿರುವುದು ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗಳ ಮಾಲೀಕ ವರ್ಗವನ್ನೇ ಹೊರತು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳು, ಪೋಷಕರು, ಅಧ್ಯಾಪಕರು ಮತ್ತು ಅದರ ಸಿಬ್ಬಂದಿಯನ್ನಲ್ಲ ಎಂಬುದನ್ನು ಮಾರ್ಕ್ಸ್ ವಾದಿ ಕಮ್ಯೂನಿಸ್ಟ್ ಪಕ್ಷ ಸ್ಪಷ್ಟಪಡಿಸ ಬಯಸುತ್ತದೆ. ಅಲ್ಪಸಂಖ್ಯಾತರಿಗೆ ಸಂವಿಧಾನ ದತ್ತವಾದ ಶಿಕ್ಷಣ ಸ್ವಾತಂತ್ರ್ಯವನ್ನು - ನೀಡುವುದರ ಜೊತೆಗೆ, ಸಾರ್ವತ್ರಿಕ ಶಿಕ್ಷಣದ ಭಾಗವಾಗಿರಲು, ಅವರ ಪಠ್ಯಕ್ರಮವನ್ನು ಶುಲ್ಕಗಳನ್ನು, ಅಧ್ಯಾಪಕರು ಹಾಗೂ ಇತರ ಸಿಬ್ಬಂದಿ ವರ್ಗ ಮತ್ತು ಆಡಳಿತ ವರ್ಗದ ಸಂಬಂಧವನ್ನು ನಿಯಂತ್ರಣಕ್ಕೊಳಪಡಿಸುವ ಶಿಕ್ಷಣ ವಿಧೇಯಕಕ್ಕೆ ಅಡ್ಡಹಾಕಲು ಪ್ರಯತ್ನಿಸುತ್ತಿರುವ ಅಜೀಜ್ ಸೇಠ್ ರವರ ಪ್ರಯತ್ನವನ್ನು ಮಾರ್ಕ್ಸ್ ವಾದಿ ಕಮ್ಯೂನಿಸ್ಟ್ ಪಕ್ಷ ತೀವ್ರವಾಗಿ ಖಂಡಿಸುತ್ತದೆ.

ಭಾಷಾ ಅಲ್ಪಸಂಖ್ಯಾತರಿಗೆ ತಮ್ಮ ಭಾಷೆಯನ್ನು ಕಲಿಯುವ, ಧಾರ್ಮಿಕ ಅಲ್ಪಸಂಖ್ಯಾತರಿಗೆ ತಮ್ಮ ಧರ್ಮದ ಸೂತ್ರಗಳನ್ನು ಅಭ್ಯಾಸ ಮಾಡಲು ಇರುವ ಸಂವಿಧಾನಿಕ ಸ್ವಾತಂತ್ರ್ಯಕ್ಕೆ ಶಿಕ್ಷಣ ವಿಧೇಯಕದಿಂದ ಯಾವ ಅಡ್ಡಿಯೂ ಇಲ್ಲದಿರುವಾಗ ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತರು ತಮ್ಮ ಶೈಕ್ಷಣಿಕ ಹಿತಗಳನ್ನು ರಕ್ಷಿಸಿಕೊಳ್ಳಲು ಶಿಕ್ಷಣ ವಿಧೇಯಕಕ್ಕೆ ಬೆಂಬಲ ನೀಡಬೇಕೆಂದು ರಾಜ್ಯ ಸಮಿತಿ ಕರೆ ನೀಡುತ್ತದೆ.

ತ. ರಾ. ಸು. ನಿಧನಕ್ಕೆ ಶ್ರದ್ಧಾಂಜಲಿ

ಪ್ರಗತಿ ಶೀಲ ಲೇಖಕರ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಕನ್ನಡದ ಸುಪ್ರಸಿದ್ಧ ತ. ರಾ. ಸು. ರವರ ನಿಧನಕ್ಕೆ ರಾಜ್ಯ ಸಮಿತಿ ತನ್ನ ಸಂತಾಪವನ್ನು ಮತ್ತು ಅವರ ಕುಟುಂಬಕ್ಕೆ ತನ್ನ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ.

ಕೆ. ಜಿ. ಎಫ್. ನ ಚಿನ್ನದ ಗಣಿ ಕಾರ್ಮಿಕರ ಸಂಘಟನೆಗೆ ಆರಂಭದ ದಿನಗಳಲ್ಲಿ ಶ್ರಮಿಸಿದ ಶ್ರೀ ಗೋವಿಂದನ್ ರವರು ದಿನಾಂಕ : 3-5-1984 ರಂದು ನಿಧನರಾದರು. ರಾಜ್ಯ ಸಮಿತಿಯು ಅವರ ನಿಧನಕ್ಕೆ ತನ್ನ ಸಂತಾಪವನ್ನು ಮತ್ತು ಅವರ ಕುಟುಂಬಕ್ಕೆ ತನ್ನ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ.

ದ. ಕ. ಜಿಲ್ಲೆಯ ಟ್ರೇಡ್ ಯೂನಿಯನ್ ಹೋರಾಟ ಮತ್ತು ಚರಿತ್ರೆ

— ಬಿ. ನಾರಾಯಣ

1936 ರಲ್ಲಿ ಪ್ರಥಮವಾಗಿ ಎಸ. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ ಸ್ಥಾಪನೆಯಾಗಿ ಸಂಬಳ ಹೆಚ್ಚಳಕ್ಕಾಗಿ ಕೆಲವು ಸಣ್ಣ ಪುಟ್ಟ ಹೋರಾಟಗಳು ನಡೆಯಿತು. 1937 ರಲ್ಲಿ ಬೀಡಿ ಮಜೂರರ ಸಂಘ ಮತ್ತು ನೇಕಾರರ ಸಂಘ ಜತೆಯಲ್ಲಿಯೇ ಹುಟ್ಟಿತು. ಬೀಡಿ ಮಜೂರರು ಇವತ್ತು ಇರುವ ಹಾಗೆ ಮನೆ ಮನೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ. ಫ್ಯಾಕ್ಟರಿ ರೀತ್ಯ ಕೆಲಸ ನಡೆಯುತ್ತಿತ್ತು. ಉದಾಹರಣೆಗೆ ಈಗಿನ ಪಿ. ವಿ. ಎಸ್ ಹೆಡ್ ಆಫೀಸು ಕೊಡಿಯಾಲ ಬೈಲು ಒಂದೇ ಕಟ್ಟಡದಲ್ಲಿ ಒಟ್ಟಿಗೆ 700 ಮಂದಿ ಕೆಲಸ ಮಾಡುತ್ತಿದ್ದರು.

ಆ ಸಮಯದಲ್ಲಿ ಯಾವ ಕಡೆಯಿಂದಲೂ ದಬ್ಬಾಳಿಕೆ ಬಂದರೂ ಕಾರ್ಮಿಕರು ಮಿಂಚಿನ ಹೋರಾಟಗಳನ್ನು ಮಾಡುತ್ತಿದ್ದರು. ಬೀಡಿ ಕಾರ್ಮಿಕರಿಗೆ ಆ ಸಮಯದಲ್ಲಿ 1000 ಬೀಡಿ ಕಟ್ಟಿದರೆ ಆರು ಆಣೆ (ಈಗಿನ 0·37 ಪೈಸೆ) ಸಂಬಳ ಸಿಗುತ್ತಿತ್ತು. 1937 ರಿಂದ 1940ರ ವರೆಗೆ ಮೂರು ದೊಡ್ಡ ಮುಷ್ಕರಗಳು ನಡೆದಿತ್ತು. ಪ್ರತಿಯೊಂದು ಮುಷ್ಕರದಿಂದಲೂ ಸಂಬಳದಲ್ಲಿ ಒಂದೊಂದು ಆಣೆ ಹೆಚ್ಚಿ 1940ರ ಕೊನೆಗೆ ಸಂಬಳ 9 ಆಣೆಯಾಯಿತು. (ಈಗಿನ 0·56 ಪೈಸೆ). ಈ ಹೋರಾಟಕ್ಕೆ ನೇಕಾರರು ಸ್ವಯಂ ಸೇವಕರಾಗಿ ದುಡಿದಿದ್ದರು. ಇವರ ಪಾತ್ರ ಮಹತ್ವದ್ದಾಗಿತ್ತು.

ನೇಕಾರರ ಸಂಘ (ಎಸ್. ಕೆ. ವೀವರ್ಸ್ ಯೂನಿಯನ್) 1937 ರಿಂದ 1940ರ ವರೆಗೆ ಎರಡು ದೊಡ್ಡ ಹೋರಾಟಗಳನ್ನು ನಡೆಸಿತ್ತು. ಇದರ ಮಧ್ಯೆ ಸಣ್ಣ ಪುಟ್ಟ ಹೋರಾಟಗಳೂ ನಡೆದಿತ್ತು.

1940ರ ನೇಕಾರರ ಮುಷ್ಕರವನ್ನು ಬ್ರಿಟಿಷ್ ಸರಕಾರ ಮುರಿಯಲು ದಕ್ಷಿಣ ಜಿಲ್ಲೆ ಕಂಡರಿಯದಂತಹ ಭಯಾನಕ ದಬ್ಬಾಳಿಕೆಯನ್ನು ನಡೆಸಿತ್ತು. ಸುಮಾರು 24 ಮಂದಿಗೆ 4 ರಿಂದ 6 ತಿಂಗಳುಗಳ ಜೈಲು ವಾಸ, ಹಲವು ಬಾರಿ ಲಾಠಿ ಚಾರ್ಜು ನಡೆಸಿತ್ತು. ಈ ಸಂದರ್ಭದಲ್ಲಿ ಎಲ್ಲಾ ಯೂನಿಯನ್ ಚಟುವಟಿಕೆಗಳಿಗೆ ನಿಷೇಧವಿತ್ತು. ಈ ಹೋರಾಟವು ಜಿಲ್ಲೆಯ ದುಡಿಯುವ ವರ್ಗದ ಕಣ್ತೆರೆಸಿತ್ತು. ಜಿಲ್ಲೆಯ ಕಾರ್ಮಿಕರಿಗೆ ಒಗ್ಗೂಡುವ ದಬ್ಬಾಳಿಕೆಯನ್ನು ಮುರಿಯುವ ಭಾವನೆ ಮೂಡಿಸಿತ್ತು. ಈ ಮೂರು ವರ್ಷಗಳಲ್ಲಿ ಯಾರ್ಡಿಗೆ 4 ಪೈ [ಈಗಿನ 2 ಪೈಸೆ] ಹೆಚ್ಚಿಗೆ ದೊರೆಯಿತು. ಈ ಹೋರಾಟಕ್ಕೆ ಬೀಡಿ ಮಜೂರರು ನೂರು ಗಟ್ಟಲೆಯಲ್ಲಿ ಸ್ವಯಂ ಸೇವಕರಾಗಿ ದುಡಿದು ಯಶಸ್ಸಿಗೆ ಪಾತ್ರರಾಗಿದ್ದಾರೆ.

ನಿಸ್ತೇಜಗೊಂಡಿದ್ದ ಸಂಘಟನೆಯ ಚಟುವಟಿಕೆಯು 1942ರಲ್ಲಿ ಬ್ರಿಟಿಷ್ ಸರಕಾರ ನಿಷೇದವನ್ನು ಹಿಂತೆಗೆದ ನಂತರ ಚುರುಕಿನಿಂದ ಪುನರ್ ಸಂಘಟನೆಯ ಕೆಲಸಗಳು ನಡೆಯಿತು. ನೇಕಾರರ ಮತ್ತು ಬೀಡಿ ಕಾರ್ಮಿಕರು ನೂರು ಗಟ್ಟಲೆಯಲ್ಲಿ ಇತರ ಮಜೂರರ ಸಂಘಟನೆ ಕಟ್ಟಲು ಪ್ರತಿಜ್ಞೆಗೈದು ಹೊರಟರು. ಹಂಚಿನ ಕಾರ್ಮಿಕರು, ಗೇರು ಬೀಜ ಕಾರ್ಮಿಕರು, ಹಾಗೂ ಮೋಟಾರು ಕಾರ್ಮಿಕರ ಸಂಘಟನೆ ಚುರುಕಿನಿಂದ ನಡೆಯಿತು. 1943 ರಲ್ಲಿ ಪ್ರಥಮ ಜಿಲ್ಲಾ ಸಮ್ಮೇಳನ ಕಾಡು ಹಿತ್ರಲು (ಕಾಂಗ್ರೆಸ್ ಸ್ಟ್ರೀಟ್) ಪ್ರದೇಶದಲ್ಲಿ ಯಶಸ್ವಿಯಾಗಿ ನಡೆಯಿತು. ಸಮ್ಮೇಳನದ ಬಹಿರಂಗ ಅಧಿವೇಶನದ ಮೆರವಣಿಗೆ ಚಾರಿತ್ರಿಕವಾಗಿ ಹೊಸ ಸ್ಫೂರ್ತಿಯನ್ನು ಜನ ಸಾಮಾನ್ಯರಲ್ಲಿ ಮೂಡಿಸಿತು. ದ. ಕ. ಜಿಲ್ಲೆಯ ಪ್ರಥಮ ಹೊಸ ಟ್ರೇಡ್ ಯೂನಿಯನ್ ಕೌನ್ಸಿಲ್ ಈ ಸಮ್ಮೇಳನದಲ್ಲಿ ರಚಿಸಲ್ಪಟ್ಟಿತು.

1943ರ ವರೆಗೆ ಮಲಬಾರ್ ಮತ್ತು ದ. ಕ. ಜಿಲ್ಲೆಯ ಜೋಯಿಂಟ್ ಕೌನ್ಸಿಲ್ ನಮ್ಮ ಜಿಲ್ಲೆಯ ಹೋರಾಟಕ್ಕೆ ಮುಖಂಡತ್ವ ನೀಡುತ್ತಿತ್ತು.

ಹಂಚು ಮಜೂರರು ಸಂಘಟನೆಯಲ್ಲಿ ಒಳಗೊಳ್ಳುತ್ತ ಮಂಗಳೂರಿನ 32 ಹಂಚು ಕಾರ್ಖಾನೆಗಳ ಪೈಕಿ 20 ಕಾರ್ಖಾನೆಗಳಲ್ಲಿ 1945ರ ಬೋನಸ್ಸು ಸಿಗಬೇಕೆಂದು 1946 ರಲ್ಲಿ ಮುಷ್ಕರ ನಡೆಯಿತು. 5 ದಿವಸ ಮುಷ್ಕರ ಮುಂದುವರಿಯುತ್ತಿದ್ದಾಗ ಆಗಿನ ಜಿಲ್ಲಾ ಕಲೆಕ್ಟರ್ ಶ್ರೀಯುತ ರಾಮದಾಸರು 2 ತಿಂಗಳ ಬೋನಸ್ಸಿಗೆ ತೀರ್ಪು ಕೊಟ್ಟರು ಇದರಿಂದ ಕಾರ್ಮಿಕರು ಇನ್ನೂ ಉತ್ತೇಜನಗೊಂಡರು. ಈ ಹೋರಾಟದ ಯಶಸ್ಸಿಗಾಗಿ ಬೀಡಿ ಮತ್ತು ನೇಕಾರ ಕಾರ್ಮಿಕರು ರಾತ್ರಿ ಹಗಲು ಅವಿಶ್ರಾಂತವಾಗಿ ದುಡಿದು ಮೊದಲ ಹೋರಾಟದಲ್ಲಿಯೇ ಹಂಚು ಕಾರ್ಮಿಕರ ಸಂಘಟನೆ ಭದ್ರ ನೆಲೆಯನ್ನು ಸ್ಥಾಪಿಸಿತು.

1946 ರಲ್ಲಿ ಮಲಬಾರ್ ಮತ್ತು ಸೌತ್ ಕೆನರಾ ಬೀಡಿ ಮಜೂರರು ಬೋನಸ್ಸು ಮತ್ತು ಮಜೂರಿ ಹೆಚ್ಚಳ ಕೋರಿಕೆಗಳನ್ನಿಟ್ಟು ಮುಷ್ಕರಕ್ಕಿಳಿದರು. 56 ದಿನಗಳು ಈ ಮುಷ್ಕರ ನಡೆಯಿತು ಈ ಮುಷ್ಕರದಲ್ಲಿ ದೊಡ್ಡ ರೀತಿಯಲ್ಲಿ ದಬ್ಬಾಳಿಕೆಯನ್ನು ಎದುರಿಸಬೇಕಾಯಿತು. ಬೀಡಿಗಳು ಪ್ರತಿಭಟನಾರ್ಥವಾಗಿ ಕೆರೆ, ಬಾವಿಗಳಲ್ಲಿ ತೇಲಾಡುತ್ತಿದ್ದವು. ಲಾಠಿ ಚಾರ್ಜು ಮತ್ತು ಜೈಲು ವಾಸವನ್ನು ಕಾರ್ಮಿಕರು ಧೀರವಾಗಿ ಎದುರಿಸಿದರು. ಆಗ ಮದರಾಸಿನಲ್ಲಿ ಅಧಿಕಾರದಲ್ಲಿದ್ದ ತಾತ್ಕಾಲಿಕ ಸರಕಾರ ಈ ವಿವಾದವನ್ನು ಮಂಗಳೂರಿನ ಸೆಷನ್ ಕೋರ್ಟಿಗೆ ಮಜೂರಿಯ ಬಗ್ಗೆ ತೀರ್ಪುಕೊಡಲು ಒಪ್ಪಿಸಿತು. ಆರು ತಿಂಗಳ ಕಾಲ ಕೋರ್ಟಿನಲ್ಲಿ ವಿವಾದ ನಡೆದು ಸಾವಿರ ಬೀಡಿಗೆ ಒಂದಾಣೆ ಹೆಚ್ಚಳ ದ. ಕ. ಜಿಲ್ಲೆ ಮತ್ತು ಮಲಬಾರ್ ಜಿಲ್ಲೆಯ ಮಜೂರರಿಗೆ ದೊರೆಯಿತು ಒಟ್ಟಾರೆ ಮಜೂರಿ ಸಾವಿರ ಬೀಡಿಗೆ 10 ಆಣೆ [ಈಗಿನ 62 ಪೈಸೆ] ಆಯಿತು.

ಇದೇ ಸಮಯದಲ್ಲಿ ನೇಕಾರರು ಮಜೂರಿ ಹೆಚ್ಚಳ ಮತ್ತು ಬೋನಸ್ಸಿಗೆ ಮುಷ್ಕರ ಮಾಡಿದರು. 32 ದಿವಸಗಳವರೆಗೂ ವೀರ ಮುಷ್ಕರ ನಡೆಯಿತು. ಮಾಲಿಕರು ಮತ್ತು ಮಜೂರರು ಸಂಬಳ ಮತ್ತು ಬೋನಸ್ಸು ವಿವಾದವನ್ನು ಶ್ರೀಯುತ ಶ್ರೀನಿವಾಸ ಮಲ್ಯರಿಗೆ ತೀರ್ಪಿಗಾಗಿ ಬಿಟ್ಟುಕೊಟ್ಟ ಕಾರ್ಮಿಕರು ಮುಷ್ಕರವನ್ನು ಹಿಂತೆಗೆದುಕೊಂಡರು. ಶ್ರೀಯುತ ಮಲ್ಯರು ಮಜೂರಿಯ ಪ್ರಶ್ನೆಯನ್ನು ಕೈಬಿಟ್ಟು ತಲಾ 30 ರೂಪಾಯಿ ಬೋನಸ್ಸು ನೀಡುವಂತೆ ತೀರ್ಪಿತ್ತರು. ಕೆಲವು ಮಾಲಕರು ಈ ಬೋನಸ್ಸು ಕೂಡ ಕೊಡದೇ ಮೋಸ ಮಾಡಿದರು. ಈ ತೀರ್ಪಿನಿಂದ ಕಾರ್ಮಿಕರಿಗೆ ಬಹಳ ಅನ್ಯಾಯವಾಗಿತ್ತು. ಈ ಅನ್ಯಾಯವನ್ನು ಕಾರ್ಮಿಕರು ದೃಢವಾಗಿ ಪ್ರತಿಭಟಿಸಿದರು.

ಬೋನಸ್ಸಿನ ಬಗ್ಗೆ ಮನೆ ಮನೆಗಳಲ್ಲಿ ಮನೆ ಮಾತಾಗಿ ಮಕ್ಕಳ ಬಾಯಲ್ಲಿಯೂ ಪದ್ಯವಾಗಿ ಮೂಡಿಬಂತು. "ಓಡೊದ್ದ ಬೀಡಿದ ಮಗ್ಗದ ದನಿಕುಲೆ" "ಮರ್ಯಾದಿಡೆ ಎಂಕಲೆನಾ ಬೋನಸ್ಸು ಕೊರ್ಲೆ" ಎಂದು ವಾಡಿಕೆಯಾಗಿ ಬಂತು (ಹಂಚು, ಬೀಡಿ, ಕೈಮಗ್ಗದ ಧನಿಗಳೆ ಮರ್ಯಾದೆಯಿಂದ ನಮ್ಮ ಬೋನಸ್ಸು ಕೊಡಿ).

ನಮ್ಮ ಜಿಲ್ಲೆಯ ಕಾರ್ಮಿಕರಲ್ಲಿ ಪ್ರಥಮವಾಗಿ ಹಂಚಿನ ಮಜೂರರು ಬೋನಸ್ಸು ಪಡೆದರು.

1947 ರಲ್ಲಿ ಹಂಚಿನ ಮಜೂರರು 10 ಕೋರಿಕೆಗಳನ್ನು ಇಟ್ಟು ಜನವರಿ 18 ರಂದು ಮುಷ್ಕರ ನೋಟೀಸನ್ನು ಎಲ್ಲ 32 ಕಾರ್ಖಾನೆಗಳಿಗೆ ನೀಡಲಾಯಿತು. ಮುಷ್ಕರ ನೋಟೀಸು ಕೊಟ್ಟ ಮರು ದಿನವೇ ಸ್ಥಾನ ಬದ್ಧತಾ ಕಾಯಿದೆಯ ಪ್ರಕಾರ ವಿಚಾರಣೆಯಿಲ್ಲದೆ ಜಿಲ್ಲೆಯ ಎಲ್ಲ ಮುಖಂಡರನ್ನು ವೆಲ್ಲೂರು ಜೈಲಿಗೆ ಬ್ರಿಟೀಷ್ ಸರಕಾರ ಒಯ್ದಿತ್ತು

ಸರಕಾರದ ನೀತಿಯನ್ನು ವಿರೋಧಿಸಿ ನೆಹರೂ ಮೈದಾನಿನಲ್ಲಿ ಸಭೆ ಸೇರಿತ್ತು ಈ ಸಭೆಯಲ್ಲಿ ಸರಕಾರ ಲಾಠಿ ಚಾರ್ಜು ಮಾಡಿದ್ದರಿಂದ 35 ಜನರಿಗೆ ಪೆಟ್ಟಾಗಿ ಆಸ್ಪತ್ರೆಗೆ ಸೇರಿಸಲಾಯಿತು. ಅವರ ಮೇಲೆಯೇ ಸೆಕ್ಷನ್ನು ಮುರಿದರೆನ್ನುವ ಕಾರಣಕ್ಕೆ ಕೇಸು ದಾಖಲಾಯಿತು. ನಂತರ ಹಂಚಿನ ಮಜೂರರು ವಿಶೇಷ ಮಹಾಸಭೆ ಸೇರಿ ಮುಂದಾಳುಗಳು ಜೈಲು ಸೇರಿದರೂ ನಾವೇ ಮುಂದಾಳುಗಳಾಗಿ ಈ ಮುಷ್ಕರವನ್ನು ನಡೆಸಬೇಕು ಎಂದೂ ಕಾರ್ಖಾನೆ ಗೇಟಿನ ಬಳಿಗೆ ಮಜೂರರು ಬರಬಾರದೆನ್ನುವ ತೀರ್ಮಾನ ಮಾಡಿತು. ಇದೇ ಸಮಯದಲ್ಲಿ 2 ನೇ ಮಹಾಯುದ್ಧ ನಿಂತು ಸರಕಾರ ಮಾಲಕರಿಂದ ತೆಗೆದುಕೊಂಡ 50 ಲಕ್ಷ ಹಂಚನ್ನು ಅರ್ಧ ಕ್ರಯಕ್ಕೆ ಮಾಲಕರಿಗೆ ಹಿಂತಿರುಗಿಸಲಾಯ್ತು ಮಾಲಕರು ಬಹಳಸಂತೋಷಗೊಂಡರು 37 ದಿವಸ ಈ ಮುಷ್ಕರ ಮುಂದುವರಿಯಿತು. ಆಗಿನ ಜಿಲ್ಲಾ ಕಲೆಕ್ಟರ್ ಶ್ರೀಯುತ ಸೋಂಡರ್ಸ್‌ದೊರೆ ಮಜೂರ ಮಾಲಕರ ಪ್ರತಿನಿಧಿಗಗನ್ನು ಕರೆದು ಚರ್ಚಿಸಿದರು. ಎರಡು ಕಡೆಯವರು ಅಧಿಕಾರಿಗೆ ತೀರ್ಪಿಗಾಗಿ ಒಪ್ಪಿಸಿದರು. 60 ದಿವಸ, ದಿನ 2 ಗಂಟೆ ಮಾಲಕ ಮಜೂರರ ಪ್ರತಿನಿಧಿಗಳ ಚರ್ಚೆ ನಡೆದು ಮಜೂರಿ, ಬೋನಸ್ಸು ತುಟ್ಟಿಭತ್ಯೆ ಇತ್ಯಾದಿ 10 ಕೋರಿಕೆಗಳ ಬಗ್ಗೆ ಶೇಕಡ 75 ಹೆಚ್ಚಳದಂತೆ ತೀರ್ಪಿತ್ತರು. ಮೇ ದಿನದ ಸಭೆ ನೆಹರೂ ಮೈದಾನಿನಲ್ಲಿ ನಡೆಯುವಾಗ ಸೋಂಡರ್ಸ್ ದೊರೆ ತೀರ್ಪಿನ ಕಾಪಿಯನ್ನು ಕಾಂ. ಕೃಷ್ಣ ಶೆಟ್ಟರ ಕೈಯಲ್ಲಿ ಒಪ್ಪಿಸಿದರು. ಮಜೂರರು ಬಹಳ ಸಂತೋಷಗೊಂಡರು.

1947 ರಲ್ಲಿ ಕಾರ್ಖಾನೆಗೆ ಆವೆ ಮಣ್ಣು ಸಾಗಿಸುವ 3 000 ದೋಣಿ ಮಜೂರರು ಹೊಸ ಕೋರಿಕೆಗಳನ್ನು ಇಟ್ಟು ಸಪ್ಟೆಂಬರ್‌ನಲ್ಲಿ ಮುಷ್ಕರ ನೋಟೀಸು ಕೊಟ್ಟರು. ಒಂದುವರೆ ತಿಂಗಳು ಈ ಮುಷ್ಕರ ನಡೆಯಿತು. ಹಳ್ಳಿಯ ಭೂಮಾಲಕರ ಕಡೆಯಿಂದ ಬರುವ ಈ ಆವೆಮಣ್ಣು ತರಲು ಭೂಮಾಲಕರು ಕರಿಗಾಲು ಗೂಂಡಾಗಳನ್ನು ಉಪಯೋಗಿಸಿದರು.

ಗೂಂಡಾಗಳು ದೋಣಿ ತರುವಾಗ ನಮ್ಮವರು ದೋಣಿಯಲ್ಲಿ ಹೋಗಿ ಅಡ್ಡಗಟ್ಟಿ ಮಣ್ಣು ಕಾರ್ಖಾನೆಗೆ ಬರದಂತೆ ಮಾಡಿದರು. ಮಜೂರ ಮಾಲಕರ ಪ್ರತಿನಿಧಿಗಳು ಸೇರಿ ಶೇಕಡ 55 ಮಜೂರಿ ಹೆಚ್ಚಳವಾಗಿ ಮುಷ್ಕರ ಹಿಂತೆಗೆಯಲಾಯ್ತು.

ಗೇರುಬೀಜ ಮಜೂರರು ಮಜೂರಿ ಹೆಚ್ಚಳ ಬೋನಸ್ಸಿಗಾಗಿ 1947 ಏಪ್ರಿಲ್‌ನಲ್ಲಿ ಮುಷ್ಕರ ನೋಟೀಸು ನೀಡಿ ಮುಷ್ಕರ ನಡೆಯಿತು ದೊಡ್ಡ ಹೋರಾಟ ನಡೆದು ಮಾಲಕರು 37 ಕಾರ್ಮಿಕರನ್ನು ವಜಾ ಮಾಡಿದರು. ಮಜೂರ ಮಾಲಕರ ಸಭೆ ಸೇರಿ ಒಂದು ರಥಲ್‌ಗೆ ಎರಡುವರೆ ಪೈ (ಒಂದೂಕಾಲು ಪೈಸೆ) ಹೆಚ್ಚಾಯಿತು ಇದೇ ಸಮಯದಲ್ಲಿ ಹಳೆ ಬಂದರಿನಲ್ಲಿ ಸಾಮಾನ್ಯ 3,000 ಲೋಡಿಂಗ್, ಅನ್ ಲೋಡಿಂಗ್ ಕೆಲಸ ಮಾಡುವ ಮಜೂರರು ದುಡಿಯುತ್ತಿದ್ದರು. ಇವರ ಮಜೂರಿ ಬಹಳ ಕಡಿಮೆ. ಹೊಸ ಮಜೂರಿಯ ಪಟ್ಟಿಯನ್ನು ತಯಾರಿಸಿ ಭಂಡಶಾಲೆ ಮಾಲಕರ ಮುಂದಿಟ್ಟರು ಮಾಲಕರ ಒಪ್ಪದೆ ಮುಷ್ಕರ ನಡೆಸಬೇಕಾಯ್ತು. 39 ದಿನಗಳು ಮುಷ್ಕರ ನಡೆಯಿತು ಆಗಿನ ಜಿಲ್ಲಾಧಿಕಾರಿಗೆ ಮಾಲಕ ಮಜೂರ ಪ್ರತಿನಿಧಿಗಳು ಪಂಚಾಯಿತಿಗೆ ಒಪ್ಪಿಸಿದರು. ಒಂದು ತಿಂಗಳು ಚರ್ಚೆ ನಡೆದು ಶೇಕಡ 60 ಮಜೂರಿ ಹೆಚ್ಚಳ ದೊರೆಯಿತು. ಇದರಿಂದ ಮಜೂರರು ಸಂತೋಷಗೊಂಡರು.

1948 ರಲ್ಲಿ ನವಭಾರತ ಪ್ರಿಂಟಿಂಗ್ ಪ್ರೆಸ್ ಕಾರ್ಮಿಕರ ಸಂಬಳ ಹೆಚ್ಚಳಕ್ಕಾಗಿ ಮುಷ್ಕರ ನಡೆಯಿತು. 36 ದಿವಸ ಈ ಮುಷ್ಕರ ಮುಂದುವರಿಯಿತು. ಇದರ ಮಾಲಕರಾದ ಯು. ಎಸ್. ಕುಡ್ವ. ಮುಷ್ಕರ ಮುರಿಯುವುದರಲ್ಲಿ ನಿಪುಣರಾಗಿದ್ದೂ ಈ ಮುಷ್ಕರವನ್ನೂ ಮುರಿದರು.

1948 ಜೂನ್ ತಿಂಗಳಿಂದ ನೆಹರೂ ಸರಕಾರ ಸ್ಥಾನ ಭದ್ರತಾ ಕಾಯಿದೆಯ ಪ್ರಕಾರ ಮುಂದಾಳುಗಳ ಕಾರ್ಯಕರ್ತರನ್ನು ಜೈಲು ಸೇರಿಸುವುದು, ಪ್ರದೇಶಗಳಲ್ಲಿ ಲಾಠಿ ಚಾರ್ಜು, ದಬ್ಬಾಳಿಕೆಗಳ ಪೋಲೀಸ್ ರಾಜ್ಯವನ್ನಾಗಿ ಮಾರ್ಪಡಿಸಿತ್ತು. ಪ್ರದೇಶದಲ್ಲಿ ರೈತರೂ ಕಾರ್ಮಿಕರು ಜನರು ಒಂದಾಗಿ ಪ್ರತಿಭಟಿಸಲಾರಂಭಿಸಿದರು. 1949 ರಲ್ಲಿ ಯೂನಿಯನ್ ಮೇಲೆ ಸರಕಾರ ನಿಷೇದ ಹೊರಿಸಿ ಯೂನಿಯನ್ ಕಛೇರಿಯ ಬೆಂಚು ಕುರ್ಚಿ ಸಹಿತ ಎಲ್ಲಾ ದಾಖಲು ಪತ್ರಗಳನ್ನೂ ಹೊರಗೆಳೆದು ಸೀಮೆ ಎಣ್ಣೆ ಸುರಿದು ಬೆಂಕಿ ಕೊಟ್ಟು, ಕೆಲವು ಕಡೆ ಸರಕಾರಿ ಬಾವಿಗಳಿಗೆ ಎಸೆದು ಅಟ್ಟಹಾಸಗೈದರು. ಕಛೇರಿಗಳ ಮಾಡು, ಬಾಗಿಲುಗಳನ್ನು ಪುಡಿ ಮಾಡಲಾಯ್ತು. ಹಂಚು ಮಜೂರ ಕಛೇರಿಯ ದಾಖಲೆ ಸೊತ್ತುಗಳನ್ನು ಸುಟ್ಟು ಹಾಕಿ, ಮಾಡು, ಗಡಿಯಾರ, ರೇಡಿಯೋವನ್ನು ಪುಡಿ ಮಾಡಿ ಪುಡಿ ಮಾಡಲಾಗದ ಮೇಜು, ಕುರ್ಚಿ ಬೆಂಚುಗಳನ್ನು ಎರಡು ವ್ಯಾನುಗಳಲ್ಲಿ ಪೋಲೀಸ್ ಸ್ಟೇಶನ್ನುಗಳಿಗೆ ಸಾಗಿಸಲಾಯ್ತು.

(ಮುಂದಿನ ಸಂಚಿಕೆ ನೋಡಿ)

ದ. ಕ. ಜಿಲ್ಲೆಯಲ್ಲಿ ಬದಲಾಗಿರುವ ಗ್ರಾಮೀಣ ಪರಿಸ್ಥಿತಿ - ಕೃಷಿ ಕೂಲಿಗಾರರ ಸಂಘಟನೆಯ ಆವಶ್ಯಕತೆ

— ಎಂ. ಕೆ. ಭಟ್

[ಮೇ ವಿಶೇಷಾಂಕಕ್ಕಾಗಿ ಕಾ.ಎಂ.ಕೆ. ಭಟ್ ಅವರು ಸಿದ್ಧ ಪಡಿಸಿದ ಈ ಲೇಖನವನ್ನು ಸ್ಥಳಾ ಭಾವದ ಕಾರಣದಿಂದಾಗಿ ಪ್ರಕಟಿಸಲಾಗಿರಲಿಲ್ಲ. ಪ್ರಸಕ್ತ ಸಂಚಿಕೆಯಲ್ಲಿ ಇದನ್ನು ಪ್ರಕಟಿಸುತ್ತಿದ್ದೇವೆ.

— ವ್ಯ ಸಂ.]

ಕರ್ನಾಟಕ ರಾಜ್ಯವನ್ನು ಪ್ರಾಕೃತಿಕ, ಭೌಗೋಲಿಕ, ಹವಾಮಾನ ಹಾಗೂ ಉತ್ಪಾದಕತೆ ಇತ್ಯಾದಿಗಳ ಆಧಾರದಲ್ಲಿ ಸ್ಥೂಲವಾಗಿ ಐದು ವಲಯಗಳನ್ನಾಗಿ ವಿಂಗಡಿಸಬಹುದು. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಸೇರಿ ಕರಾವಳಿ ವಲಯ; ಕೊಡಗು ಜಿಲ್ಲೆ ಪೂರ್ತಿ, ಹಾಸನ, ಚಿಕ್ಕಮಂಗಳೂರು ಮತ್ತು ಬೆಳಗಾವಿ ಜಿಲ್ಲೆಗಳ ಸುಮಾರು ಪಶ್ಚಿಮಾರ್ಧ ಮತ್ತು ಧಾರವಾಡ ಜಿಲ್ಲೆಯ ಪಶ್ಚಿಮ ಭಾಗದ ಸ್ವಲ್ಪ ಪ್ರದೇಶವು ಸೇರಿದಂತೆ ಕರಾವಳಿ ವಲಯಕ್ಕೆ ತಾಗಿ ಇರುವ ಗುಡ್ಡಗಾಡುವಲಯ; ಬೆಳಗಾವಿ, ಧಾರವಾಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ತುಮಕೂರು ಮತ್ತು ಮೈಸೂರು ಜಿಲ್ಲೆಗಳ ಕೆಲವು ಭಾಗಗಳು ಸೇರಿ ಗುಡ್ಡಗಾಡು ವಲಯಕ್ಕೆ ತಾಗಿ ಇರುವ ಪಶ್ಚಿಮ ಬೆಳವಲನಾಡ ಮತ್ತು ಬೀದರ ಜಿಲ್ಲೆ ಪೂರ್ತಿ ಹಾಗೂ ಗುಲಬರ್ಗ ಜಿಲ್ಲೆಯ ಸ್ವಲ್ಪ ಪ್ರದೇಶ ಸೇರಿದಂತೆ ಈಶಾನ್ಯ ಬೆಳವಲನಾಡು; ಬಿಜಾಪುರ, ರಾಯಚೂರು, ಬಳ್ಳಾರಿ, ಚಿತ್ರದುರ್ಗ, ಕೋಲಾರ, ಬೆಂಗಳೂರು ಮಂಡ್ಯ ಜಿಲ್ಲೆಗಳು ಪೂರ್ತಿ ಹಾಗೂ ತುಮಕೂರು ಮತ್ತು ಗುಲಬರ್ಗ ಜಿಲ್ಲೆಗಳ ಬಹು ಪಾಲು, ಬೆಳಗಾವಿ, ಧಾರವಾಡ ಮತ್ತು ಮೈಸೂರು ಜಿಲ್ಲೆಗಳ ಪೂರ್ವ ಭಾಗಗಳು ಇತ್ಯಾದಿ ಸೇರಿದಂತೆ ಎರಡು ಬೆಳವಲ ನಾಡುಗಳ ಮಧ್ಯೆ ಇರುವ ಒಣ ಬೇಸಾಯ ವಲಯ; ಒಣ ಬೇಸಾಯ ವಲಯದಲ್ಲಿ ನೀರಾವರಿ ಸೌಲಭ್ಯಗಳನ್ನು ಒದಗಿಸಿ ಕೊಡುವ ಮೂಲಕ ಬೆಳವಣಿಗೆ ಯಾಗುತ್ತಿರುವ ನೀರಾವರಿ ಪ್ರದೇಶ - ಈ ರೀತಿಯಲ್ಲಿ ಮುಖ್ಯ 5 ವಲಯಗಳನ್ನಾಗಿ ವಿಂಗಡಿಸಬಹುದು. ಒಂದೊಂದು ವಲಯದೊಳಗೂ ಪ್ರಾದೇಶಿಕ ಭಿನ್ನತೆ, ಬೆಳೆಸುವ ಬೆಳೆಯಲ್ಲಿ ವ್ಯತ್ಯಾಸ ಇತ್ಯಾದಿ ಇರಬಹುದಾದರೂ ಸಾಮಾನ್ಯವಾಗಿ ಕೆಲವು ಗುಣಗಳು ಒಂದೇ ರೀತಿಯದ್ದಾಗಿವೆ. ಗೇಣಿದಾರರ ಪ್ರಶ್ನೆ, ಕೃಷಿ ಕೂಲಿಗಾರರ ಪ್ರಶ್ನೆ, ಭೂ ರಹಿತ ಬಡಜನರ ಪ್ರಶ್ನೆ, ಬರಗಾಲ ಪರಿಹಾರದ ಪ್ರಶ್ನೆ, ನೀರಾವರಿ ಸೌಲಭ್ಯದ ಪ್ರಶ್ನೆ ಇವಿತ್ಯಾದಿಗಳು ಬೇರೆ ಬೇರೆ ವಲಯಗಳಲ್ಲಿ ಬೇರೆಬೇರೆ ಪ್ರಮಾಣದಲ್ಲಿ ಇವೆ ಆದುದರಿಂದ ರಾಜ್ಯದಾದ್ಯಂತ, ಅದೂ ರಾಜ್ಯ ವ್ಯಾಪ್ತಿಯಾದ ಸಂಘಟನೆಯೂ ಇಲ್ಲದಿರುವಾಗ, ಒಂದೇ ಬೇಡಿಕೆಯ ಮೇಲೆ ಒಂದೇ ಸಮನಾದ ಹೋರಾಟವನ್ನು ಪ್ರಾರಂಭದ ಹಂತಗಳಲ್ಲಿ ನಡೆಸುವುದು ಕಷ್ಟ ಸಾಧ್ಯ. ಆದರೆ ಬೇರೆ ಬೇರೆ ವಲಯ ಮತ್ತು ಪ್ರದೇಶಗಳಲ್ಲಿ ಮುಖ್ಯವಾಗಿ ಕಂಡು ಬರುವ ಪ್ರಶ್ನೆಗಳ ಆಧಾರಿತವಾಗಿ ಸಂಘಟನೆ ಮತ್ತು ಹೋರಾಟಗಳನ್ನು ಬೆಳೆಸುತ್ತಾ, ರಾಜ್ಯ ವ್ಯಾಪ್ತಿಯಾದ ಹೋರಾಟ ಮತ್ತು ಸಂಘಟನೆಗಳನ್ನು ಬೆಳೆಸುವುದು ಸಾಧ್ಯವಿದೆ.

ಗ್ರಾಮೀಣ ಪರಿಸ್ಥಿತಿ

ಈ ಲೇಖನವು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿ ಇರುವುದರಿಂದ ರಾಜ್ಯದ ಗ್ರಾಮೀಣ ಪರಿಸ್ಥಿತಿ ಬಗ್ಗೆ ಹೆಚ್ಚಿಗೆ ವಿವರ ಕೊಡುವುದು ಕಷ್ಟ ಸಾಧ್ಯ. ಆದರೆ ದಕ್ಷಿಣ ಕನ್ನಡ ಜಿಲ್ಲೆಯು ರಾಜ್ಯದಲ್ಲಿ ಯಾವ ವಲಯದಲ್ಲಿದೆ ಮತ್ತು ಬೇರೆಡೆಗಳಿಂದ ಭಿನ್ನವಾಗಿದೆ ಎಂಬುದನ್ನು ತಿಳಿದು ಕೊಳ್ಳುವುದು ಅವಶ್ಯವಾದುದರಿಂದ ಈ ಮೇಲಿನದನ್ನು ಉಲ್ಲೇಖಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯು ಪಶ್ಚಿಮ ಘಟ್ಟಗಳ ಮತ್ತು ಅರಬ್ಬಿ ಸಮುದ್ರದ ಮಧ್ಯೆ ಇದ್ದು, ಇಲ್ಲಿಯ ಕೃಷಿಯು ಮಳೆಯ ನೀರು ಮತ್ತು ಪ್ರಾಕೃತಿಕವಾಗಿ ದೊರೆಯುವ ನೀರನ್ನು ಆಧರಿಸಿದೆ. ಇಡೀ ಜಿಲ್ಲೆಯಲ್ಲಿ ಬೆರಳೆಣಿಕೆಯಷ್ಟು ಅತೀ ಸಣ್ಣ ನೀರಾವರಿ ಯೋಜನೆಗಳನ್ನು ಬಿಟ್ಟರೆ ಯಾವುದೇ ದೊಡ್ಡ ಅಥವಾ ಸಣ್ಣ ನೀರಾವರಿ ಯೋಜನೆ ಇಲ್ಲ. ಕೆರೆ, ಬಾವಿ, ಕಟ್ಟಗಳ ಮೂಲಕ ನೀರು ಸಂಗ್ರಹಿಸಿ ಉಪಯೋಗಿಸುವುದು, ಹೊಳೆ ಅಥವಾ ನದಿಗಳ ನೀರನ್ನು ಪಂಪುಸೆಟ್ಟುಗಳ ಮೂಲಕ ಪಡೆದು ಕೃಷಿ ಮಾಡುವುದು ಸರ್ವೇ ಸಾಮಾನ್ಯವಾಗಿದೆ. ಕರಾವಳಿಯುದ್ದಕ್ಕೂ ಹೆಚ್ಚಿಗೆ ಬಯಲು ಸೀಮೆ ಇದ್ದು, ಒಳನಾಡು ದಟ್ಟವಾದ ಅರಣ್ಯಗಳಿಂದ ಕೂಡಿದ ಮಲ್ನಾಡು ಪ್ರದೇಶವಾಗಿದೆ.

ಈ ಜಿಲ್ಲೆಯ ಮುಖ್ಯ ಆಹಾರದ ಬೆಳೆ ಭತ್ತ ಮತ್ತು ಮುಖ್ಯ ಹಣದ ಬೆಳೆ ಅಡಿಕೆ. ಅಡಿಕೆಯನ್ನು ಹೆಚ್ಚಾಗಿ ಒಳನಾಡಿನಲ್ಲಿ ಬೆಳೆಸಲಾಗುತ್ತಿದೆ. ಈಗೀಗ ಕೊಕ್ಕೋವನ್ನು ಹಣದ ಬೆಳೆಯನ್ನಾಗಿ ಬೆಳೆಸಲಾಗುತ್ತಿದೆ. ಇತ್ತೀಚೆಗೆ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ, ಅಂದರೆ ಸುಳ್ಯ, ಪುತ್ತೂರು ಮತ್ತು ಬೆಳ್ತಂಗಡಿ ತಾಲೂಕಿನ ಮಲ್ನಾಡು ಭಾಗಗಳಲ್ಲಿ ರಬ್ಬರ್ ಕೃಷಿಯನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸುವುದು ಪ್ರಾರಂಭವಾಗಿದೆ. ಕೆಲವು ವರ್ಷಗಳ ಹಿಂದೆ ತೆಂಗನ್ನು ಸ್ವಂತ ಉಪಯೋಗಗಳಾಗಿಯೇ ಹೆಚ್ಚಾಗಿ ಬೆಳೆಸುತ್ತಿದ್ದರೆ, ಈಗೀಗ ಅದನ್ನು ಹಣದ ಬೆಳೆಯನ್ನಾಗಿ ಬೆಳೆಸಲಾಗುತ್ತಿದೆ ಕರಾವಳಿ ಪ್ರದೇಶದಲ್ಲಿ ಕೆಲವೆಡೆ ಕಬ್ಬನ್ನು ಸಣ್ಣ ಪ್ರಮಾಣದಲ್ಲ ಬೆಳೆಸಿ ಬೆಲ್ಲ ತಯಾರಿಸಲಾಗುತ್ತಿದೆ. ಈ ಜಿಲ್ಲೆಯಲ್ಲಿ ಗೇರುಬೀಜ, ಕರಿಮೆಣಸು ಮೊದಲಾದುವುಗಳು ಮೊದಮೊದಲು ಅರಣ್ಯ ಉತ್ಪತ್ತಿಯಾಗಿದ್ದುವು. ಆದರೆ ಈಗೀಗ ದೊಡ್ಡ ಪ್ರಮಾಣದಲ್ಲಿ ಗೇರು ಕೃಷಿಯನ್ನು ಇತರ ಕೃಷಿಯೊಂದಿಗೆ ಕರಿಮೆಣಸನ್ನೂ ಬೆಳೆಸಲಾಗುತ್ತಿವೆ. ಮಾವು, ಹಲಸು, ಅನಾನಸು ಹಾಗೂ ಇನ್ನಿತರ ಹಲವು ಫಲವಸ್ತುಗಳು ಮತ್ತು ಹಲವು ವಿಧದ ತರಕಾರಿಗಳನ್ನು ಬೆಳೆಸಲಾಗುತ್ತಿದೆ. ಈಗೀಗ ಕೆಲವೆಡೆ ರೇಷ್ಮೆ ಬೆಳೆಯನ್ನು ಪ್ರಾರಂಭಿಸಲಾಗಿದೆ.

ಕಳೆದ ಎರಡು ಮೂರು ದಶಕಗಳಲ್ಲಿ ಜಿಲ್ಲೆಯಲ್ಲಿ ಕೃಷಿ ಸಂಬಂಧಗಳೂ, ಗ್ರಾಮೀಣ ಪರಿಸ್ಥಿತಿಯೂ ಬಹಳಷ್ಟು ಬದಲಾಗಿವೆ. ಮೂರು ನಾಲ್ಕು ದಶಕಗಳ ಹಿಂದೆ ಈ ಜಿಲ್ಲೆಯಲ್ಲಿ ಗೇಣಿದಾರ ಪದ್ಧತಿಯು ಅತ್ಯಂತ ವ್ಯಾಪಕವಾಗಿದ್ದು ಅದು ಮುಖ್ಯ ಕೃಷಿ ಉತ್ಪಾದನಾ ಸಂಬಂಧವಾಗಿತ್ತು. ಆಗ ಹಣದ ಬೆಳೆಗಿಂತಲೂ (ಮುಖ್ಯವಾಗಿ ಅಡಿಕೆ) ಮುಖ್ಯವಾಗಿ ಆಹಾರದ ಬೆಳೆಯಾದ ಭತ್ತವನ್ನು ಬೆಳೆಸಲಾಗುತ್ತಿತ್ತು.

ಕಾಲ ಕ್ರಮೇಣದಲ್ಲಿ ಬಂಡವಾಳಶಾಹಿ ಪದ್ಧತಿಯು ಬೆಳವಣಿಗೆ ಮತ್ತು ಭೂಸುಧಾರಣ ಕಾನೂನುಗಳ ಪರಿಣಾಮವಾಗಿ ಗೇಣಿದಾರ ಪದ್ಧತಿಯು ಹೋಗಿ, ಈಗ ಬಂಡವಾಳಶಾಹಿ ಕೃಷಿ ಸಂಬಂಧಗಳೂ ಸ್ವಂತ ಬೇಸಾಯ ಮಾಡುವುದು ಕಂಡು ಬರುತ್ತಿದೆ. ಒಳನಾಡಿನಲ್ಲಿ ವಿಶಾಲವಾದ ಭತ್ತದ ಹೊಲಗಳು ಮಾಯವಾಗಿ ಅವುಗಳ ಸ್ಥಾನದಲ್ಲಿ ಅಡಿಕೆ ತೋಟಗಳು ಎಲ್ಲೆಡೆಗಳಲ್ಲೂ ಬೆಳೆದುನಿಂತಿವೆ. ಭೂ ಸುಧಾರಣಾ ಕಾನೂನುಗಳು ಬಡ ಗೇಣಿದಾರ ರೈತನನ್ನು ಭೂಮಿಗೆ ಒಡೆಯನನ್ನಾಗಿ ಮಾಡುವುದರ ಬದಲು ಹಳೆಯ ಪಾಳೆಯಗಾರಿ ಭೂಮಾಲಕರನ್ನು ಬಂಡವಾಳಶಾಹಿ ಭೂಮಾಲಕರನ್ನಾಗಿ ಮಾರ್ಪಡಿಸಿದೆ. ಗೇಣಿದಾರ ರೈತರ ಸಂಘಟನೆ ಇದ್ದೆಡೆ ಹಾಗೂ ಅಲ್ಲೋ ಇಲ್ಲೋ ಎಂಬಂತೆ ಕೆಲವೇ ಗೇಣಿದಾರ ರೈತರಿಗೆ ಅಲ್ಪ ಸ್ವಲ್ಪ ಭೂಮಿ ದೊರಕಿದೆ. ಅಂತಿಮವಾಗಿ ಭೂ ಸುಧಾರಣಾ ಕಾನೂನು ರಚಿಸಿ, ಅದನ್ನು ಜಾರಿಗೊಳಿಸುವುದಕ್ಕೆ ಪ್ರಾರಂಭಿಸುವ ಮೊದಲೇ ನೂರಕ್ಕೆ ಎಂಭತ್ತರಷ್ಟು ಗೇಣಿದಾರ ರೈತರನ್ನು ಭೂಮಿಯಿಂದ ಒಕ್ಕಲೆಬ್ಬಿಸಲಾಗಿತ್ತು. ಇನ್ನೂ ಉಳಿದವರಲ್ಲಿ ಹೆಚ್ಚಿನವರಿಗೆ ಯಾವುದೇ ಹಕ್ಕುಗಳು ದಾಖಲೆಯಲ್ಲಿ ಉಳಿಯದಂತೆ ನೋಡಲಾಗಿತ್ತು. ಕೊನೆಗೆ ಅಳಿದುಳಿದ ಗೇಣಿದಾರ ರೈತರಲ್ಲಿ ಕೆಲವರಿಗೆ ಅಲ್ಪ ಸ್ವಲ್ಪ ಭೂಮಿಯು ದೊರೆತಿದೆಯಷ್ಟೆ. ಇಡೀ ರಾಜ್ಯದಲ್ಲಿ ಗೇಣಿದಾರ ಪದ್ಧತಿಯು ಅತ್ಯಂತ ದೊಡ್ಡ ಪ್ರಮಾಣದಲ್ಲಿದ್ದುದು ಈ ಜಿಲ್ಲೆಯಲ್ಲಿ. ಭೂ ನ್ಯಾಯ ಮಂಡಳಿಗಳಿಗೆ ಸಲ್ಲಿಸಿರುವ ಅರ್ಜಿಗಳಲ್ಲಿ ಈ ಜಿಲ್ಲೆಯದೇ ದೊಡ್ಡ ಪಾಲು.

ಕೃಷಿ ಕೂಲಿಗಾರರು

ಹಿಂದೆ ಗೇಣಿದಾರ ರೈತರಾಗಿದ್ದ ಬಡ ಜನರಲ್ಲಿ ಹೆಚ್ಚಿನವರು ಈಗ ಭೂ ಹೀನ ಕೃಷಿ ಕೂಲಿಗಾರರು ಮತ್ತು ಕೆಲವರು ಸರಕಾರಿ ಜಾಗದಲ್ಲಿ ಅಲ್ಪ ಸ್ವಲ್ಪ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದು ಮುಖ್ಯವಾಗಿ ಕೃಷಿ ಕೂಲಿಮಾಡಿ ಬದುಕುವವರೇ ಆಗಿದ್ದಾರೆ. ಈ ಜಿಲ್ಲೆಯಲ್ಲಿ ಕೃಷಿಕೂಲಿಗಾರರ ಸಂಖ್ಯೆ ಶೇಕಡಾ 40 ರಿಂದ 50 ರಷ್ಟಿರಬಹುದು ಇವರಲ್ಲಿ ಒಂದು ದೊಡ್ಡ ಅಂಶ ಹಿಂದುಳಿದ ವರ್ಗದವರಾಗಿದ್ದು ಸಾಮಾಜಿಕವಾಗಿ ಅತ್ಯಂತ ತುಳಿಯಲ್ಪಟ್ಟವರಾಗಿದ್ದಾರೆ.

ಕೃಷಿ ಕೂಲಿಗಾರರ ಪರಿಸ್ಥಿತಿಯು ಅತ್ಯಂತ ಶೋಚನೀಯವಾಗಿದೆ. ಪೇಟೆ ಪ್ರದೇಶ ಹಾಗೂ ಪೇಟೆಯ ಸುತ್ತಮುತ್ತಲಿನ ಹಳ್ಳಿ ಪ್ರದೇಶಗಳಲ್ಲಿ ಕೃಷಿ ಕೂಲಿಗಾರರಿಗೆ ಸ್ವಲ್ಪ ಹೆಚ್ಚಿಗೆ ಸಂಬಳ ಸಿಗುವುದಾದರೂ ಗ್ರಾಮಾಂತರ ಪ್ರದೇಶಗಳಲ್ಲಿ ಅವರಿಗೆ ಸಿಗುವ ವೇತನ ಅತ್ಯಲ್ಪ. ಯಾವುದೇ ರೀತಿಯ ಕೆಲಸದ ಭದ್ರತೆ ಇಲ್ಲದ ಇವರಿಗೆ ಇನ್ನಾವುದೇ ಸವಲತ್ತುಗಳೂ ಇಲ್ಲ.

ಎಳೆ ಮಗುವಾಗಿರಮಾಗಲಿಂದ ಮುದುಕ ಮುದುಕಿಯರಾಗುವ ತನಕ ಕೃಷಿ ಕೂಲಿಗಾರರಾಗಿ ದುಡಿಯುವ ಈ ಪ್ರಾಮುಖ್ಯ ಹಾಗೂ ದೊಡ್ಡ ವಿಭಾಗದ ಶೋಷಿತ ಜನತೆಯನ್ನು ಇನ್ನೂ ಸಂಘಟಿಸಿಲ್ಲ. ಇವರನ್ನು ಸಂಘಟಿಸುವುದು ಅತೀ ತುರ್ತಾಗಿ ಆಗಬೇಕಿರುವ ಕೆಲಸವಾಗಿದೆ. ನಮ್ಮ ಗುರಿಯು ಕೇವಲ ಪ್ರಜಾಪ್ರಭುತ್ವ ಕ್ರಾಂತಿಯನ್ನು ಯಶಸ್ವಿಯಾಗಿ ಪೂರ್ತಿಗೊಳಿಸುವುದಷ್ಟೆ ಅಲ್ಲ; ಪ್ರಜಾಪ್ರಭುತ್ವ ಕ್ರಾಂತಿಯನ್ನು ಮುಂದೆ ಸಮಾಜವಾದಿ ಕ್ರಾಂತಿಯತ್ತ ಕೊಂಡಯ್ಯ ಬೇಕಿದೆ. ಸಮಾಜವಾದ ಮತ್ತು ಸಮತಾವಾದ ನಮ್ಮ ಅಂತಿಮ ಗುರಿಯಾಗಿದೆ. ಸಮಾಜವಾದ ಕ್ರಾಂತಿಯೆಂದರೆ ಖಾಸಗಿ ಆಸ್ತಿ ಸಂಬಂಧಗಳನ್ನು ನಾಶಮಾಡಿ ಉತ್ಪಾದನಾ ಸಂಬಂಧಗಳನ್ನು ಸಮಾಜೀಕರಿಸುವುದೇ ಆಗಿದೆ. ಅಂದರೆ ಉತ್ಪಾದನಾ ಸಾಧನಗಳು ಖಾಸಗಿ ಆಸ್ತಿಯಾಗಿರುವ ಬದಲು ಅವನ್ನು ಸಮಾಜದ ನಿಯಂತ್ರಣಕ್ಕೆ ತರುವುದೇ ಆಗಿದೆ. ಯಾವುದೇ ಖಾಸಗಿ ಆಸ್ತಿ ಇರದ, ಶರೀರ ಶ್ರಮವನ್ನು ಮಾರಾಟಮಾಡಿ ಬದುಕುವ ಕಾರ್ಮಿಕ ವರ್ಗದಿಂದ ಮಾತ್ರ ಇದನ್ನು ಸಾಧಿಸುವುದು ಸಾಧ್ಯ.

ಕಾರ್ಮಿಕ ವರ್ಗದ ನೇತೃತ್ವದಲ್ಲಿ ನಡೆಯಲಿರುವ ಸಮಾಜವಾದಿ ಕ್ರಾಂತಿಗೆ ಗ್ರಾಮೀಣ ಪ್ರದೇಶದಲ್ಲಿ ಸಿಗಬಹುದಾದ ಅತ್ಯಂತ ನಿಕಟ ಸ್ನೇಹಿತ ವರ್ಗ ಎಂದರೆ ಕೃಷಿ ಕೂಲಿಗಾರ ವರ್ಗ. ಕಾರ್ಮಿಕ ವರ್ಗದ ನೇತೃತ್ವದಲ್ಲಿ ಪ್ರಜಾಪ್ರಭುತ್ವ ಕ್ರಾಂತಿಯನ್ನು ಸಂಪೂರ್ಣ ಗೊಳಿಸಿ ಸಮಾಜವಾದ ಕ್ರಾಂತಿಯತ್ತ ಮುನ್ನಡೆಯುವುದಕ್ಕೆ ಸಹಾಯಕವಾಗಿ ಕೃಷಿ ಕೂಲಿಗಾರರನ್ನು ಸಂಘಟಿಸುವುದು ಅತೀ ಮುಖ್ಯ ಕೆಲಸವಾಗಿದೆ.

ಇತ್ತೀಚೆಗಷ್ಟೆ ಅಖಿಲ ಭಾರತ ಮಟ್ಟದಲ್ಲಿ ಕೃಷಿ ಕೂಲಿಗಾರರ ಸಂಘಟನೆಯನ್ನು ರೂಪಿಸಲಾಗಿದೆ. ಕರ್ನಾಟಕ ರಾಜ್ಯದಲ್ಲೂ ಅದನ್ನು ಅತೀ ಜರೂರಾಗಿ ಸಂಘಟಿಸಲೇ ಬೇಕು. ಆದರೆ ಹಾಗೆ ಸಂಘಟಿಸುವಾಗ ರಾಜ್ಯದಾದ್ಯಂತ ಒಂದೇ ಸಮನಾದ ಪರಿಸ್ಥಿತಿ ಇಲ್ಲದಿರುವುದರಿಂದ ಕೃಷಿ ಕೂಲಿಗಾರರು ಹೆಚ್ಚಿನ ಸಂಖ್ಯೆಯಲ್ಲಿರುವೆಡೆಗಳಿಗೆ ಒತ್ತು ಕೊಟ್ಟು ಸಂಘಟಿಸುತ್ತಾ ರಾಜ್ಯ ಮಟ್ಟದ ಸಂಘಟನೆಯನ್ನು ರೂಪಿಸಿಕೊಳ್ಳಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತ್ಯಂತ ಹೆಚ್ಚಿಗೆ ಪ್ರಮಾಣದಲ್ಲಿ ಕೃಷಿ ಕೂಲಿಗಾರರಿರುವುದರಿಂದ ಇಲ್ಲಿ ಈ ಸಂಘಟನೆಯನ್ನು ಕೂಡಲೇ ಕಟ್ಟಿ ಬೆಳೆಸುವುದು ಸಾಧ್ಯ ಮತ್ತು ಇದು ಅತೀ ಅವಶ್ಯ. ಇದರೊಂದಿಗೆ ರಾಜ್ಯದ ಬೇರೆಡೆಗಳಲ್ಲೂ, ಮುಖ್ಯವಾಗಿ ನೀರಾವರಿ ಪ್ರದೇಶಗಳಲ್ಲೂ ಈ ಸಂಘಟನೆಯನ್ನು ಬೆಳೆಸಲು ಗಮನವೀಯ ಬೇಕು.

ಭೂಮಿಯ ಪ್ರಶ್ನೆ

ಭೂ ಸುಧಾರಣ ಕಾಯ್ದೆಯ ಪರಿಣಾಮವಾಗಿ ಭೂಮಿಯ ಪ್ರಶ್ನೆಯು ಮುಗಿ

(ಮುಂದಿನ ಪುಟ ನೋಡಿ)

ಎ. ಕೆ. ಗೋಪಾಲನ್ ಭವನ ನಿಧಿಗೆ ಸಹಾಯ ಮಾಡಿ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಗೆ ಸ್ವಂತ ಕಟ್ಟಡ ಇಲ್ಲದಿರುವುದರಿಂದ ಲೋಕಸಭೆ ಸದಸ್ಯರ ಆಶ್ರಯ ಪಡೆಯ ಬೇಕಾಗಿದೆ. ಕೇಂದ್ರ ಸಮಿತಿಯ ಕಾರ್ಯ, ಅಲ್ಲಿ ಕೆಲಸ ಮಾಡುತ್ತಿರುವ ಸಂಗಾತಿಗಳಿಗೆ ಇದರಿಂದ ತೊಂದರೆಯಾಗಿದೆ. ಪಾರ್ಟಿಯ ಹಾಗೂ ಅದರ ಮುಖಂಡತ್ವದಲ್ಲಿಯ ಚಟುವಟಿಕೆ ಬೆಳೆಯುತ್ತಿರುವಾಗ ಉತ್ತಮ ರೀತಿಯ ವ್ಯವಸ್ಥೆ ಅತ್ಯಗತ್ಯ. ಆದ್ದರಿಂದ ದಿಲ್ಲಿಯಲ್ಲಿ ಕೇಂದ್ರ ಸಮಿತಿಗೆ ಸ್ವಂತ ಕಟ್ಟಡ ಕಟ್ಟುವ ಅವಶ್ಯಕತೆಯಿದೆ.

ಈ ದೃಷ್ಟಿಯಿಂದ ಎ. ಕೆ. ಗೋಪಾಲನ್ ಭವನ ಟ್ರಸ್ಟನ್ನು ರಚಿಸಲಾಗಿದೆ. ಅದರಲ್ಲಿ ಇ. ಎಂ. ಎಸ್ ನಂಬೂದಿರಿಪಾದ್, ಬಿ. ಟಿ. ರಣದಿವೆ, ಎಂ. ಬಸವಪುನ್ನಯ್ಯ, ಹರ್‌ಕಿಶನ್ ಸಿಂಗ್ ಸೂರಜಿತ್, ಪಿ. ರಾಮಮೂರ್ತಿ ಸಮರಮುಖರ್ಜಿ ಮತ್ತು ಇ. ಬಾಲಾನಂದನ್ ಅವರಿದ್ದಾರೆ. ಕೇಂದ್ರ ಸಮಿತಿಯ ಕಟ್ಟಡಕ್ಕೆ ಎ. ಕೆ. ಗೋಪಾಲನ್ ಭವನ್ ಎಂದು ಹೆಸರಿಡಲಾಗಿದೆ.

ರೂ. 32 ಲಕ್ಷ ಕೊಟ್ಟು 1200 ಚೌಕಮೀಟರ್ ಸ್ಥಳವನ್ನು ಕೊಂಡುಕೊಳ್ಳಲಾಗಿದೆ. ಐದು ಮಹಡಿಗಳ ಕಟ್ಟಡ ಕಟ್ಟಲಿಕ್ಕೆ ಇನ್ನೂ ರೂ. 50 ಲಕ್ಷ ಬೇಕಾದೀತು. ಪಿ.ಬಿ. ಸದಸ್ಯರು ಗೆಳೆಯರಿಂದ ಸಾಲ ಎತ್ತಿ ಸ್ಥಳ ಖರೀದಿ ಮಾಡಿದ್ದಾರೆ. ಆ ಸಾಲವನ್ನೂ ವಾಪಸ್ ಕೊಡಬೇಕಾಗಿದೆ.

ಪಶ್ಚಿಮ ಬಂಗಾಲ, ಕೇರಳ, ತಮಿಳುನಾಡು, ಪಂಜಾಬ್ ಮೊದಲಾದ ರಾಜ್ಯ ಸಮಿತಿಗಳು ಅತಿ ಹೆಚ್ಚು ದೇಣಿಗೆ ಕೊಡಲು ಮುಂದೆ ಬಂದಿದ್ದಾರೆಂದು ತಿಳಿಸಲು ಆನಂದವಾಗುತ್ತಿದೆ. ಆದರೆ ಅಷ್ಟಾದರೂ ಕೂಡ ಕಟ್ಟಡ ನಿಧಿಗೆ ಬೇಕಾದ ರೂ. 80 ಲಕ್ಷಕ್ಕೂ ಮೇಲ್ಪಟ್ಟ ನಿಧಿಗೆ ಅದು ಕಡಿಮೆ ಬೀಳುತ್ತದೆ.

ಆದ್ದರಿಂದ ಕಾರ್ಮಿಕರಿಗೂ, ರೈತರಿಗೂ, ಮಧ್ಯಮ ವರ್ಗದ ನೌಕರದಾರರಿಗೂ, ಹಾಗೆಯೇ ಇತರ ಪುರೋಗಾಮಿ ವಿಚಾರದ ಜನರಿಗೂ ನಮ್ಮ ವಿನಂತಿಯೇನೆಂದರೆ ಈ ವರ್ಷದ ಕೊನೆಯೊಳಗಾಗಿ ಎ. ಕೆ. ಗೋಪಾಲನ್ ಭವನದ ಕೆಲಸ ಪೂರ್ತಿಗೊಳಿಸುವ ಸಲುವಾಗಿ ತಮ್ಮಿಂದ ಶಕ್ಯವಾದಷ್ಟು ಧನ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ. ಎಲ್ಲ ಪಾರ್ಟಿ ಕಮಿಟಿಗಳೂ, ಪಾರ್ಟಿ ಘಟಕಗಳೂ, ಪಾರ್ಟಿ ಸದಸ್ಯರೂ, ಪಾರ್ಟಿ ಸಹಾನುಭೂತಿದಾರರೂ, ಹಿತೈಷಿಗಳೂ ತಮ್ಮ ಸ್ವಂತ ಸಹಾಯ ಧನವನ್ನು ಕೊಡುವುದಲ್ಲದೆ ತಮ್ಮ ಗೆಳೆಯರಿಂದಲೂ ಕೂಡಿಸಿ ಕೊಡಬೇಕೆಂದೂ ಕೇಳಿಕೊಳ್ಳುತ್ತೇವೆ.

ನಮ್ಮ ದೇಶದ ರಾಜಕೀಯದಲ್ಲಿಯೂ, ಹಾಗೆಯೇ ಅಂತಾರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ಭಿನ್ನಾಭಿಪ್ರಾಯದಿಂದಾಗಿ ಉಂಟಾಗಿರುವ ಗೊಂದಲದಲ್ಲಿ ಮಾರ್ಕ್ಸ್‌ವಾದ-ಲೆನಿನ್‌ವಾದದ ಮೂಲಭೂತ ತತ್ವಗಳನ್ನು ಎತ್ತಿ ಹಿಡಿಯುವುದರಲ್ಲಿಯೂ ಸಿ.ಪಿ.ಐ. (ಎಂ) ನ ಮುಖ್ಯವಾದ, ವಿಶಿಷ್ಟವಾದ ಪಾತ್ರದ ಕುರಿತು ಜನರ ಗಮನ ಸೆಳೆಯಲಿಚ್ಛಿಸುತ್ತೇವೆ.

ಸರ್ವಾಧಿಕಾರಿ ಪಕ್ಷದ ವಿರುದ್ಧವಾದ ತ್ವರಿತ ಚಳುವಳಿಗಳಿಗೆ ಸಿಪಿಐ (ಎಂ) ಸರಿಯಾದ, ಪ್ರಜಾಪ್ರಭುತ್ವ ರೀತಿಯ ಮಾರ್ಗದರ್ಶನ ನೀಡಿ, ದೇಶದ ರಾಜಕೀಯದಲ್ಲಿ ಪ್ರಭಾವ ಬೀರುವಲ್ಲಿ ಪ್ರಧಾನ ಪಾತ್ರ ವಹಿಸುತ್ತಿದೆ. ನಮ್ಮ ದೇಶದಲ್ಲಿ ಸಿಪಿಐ (ಎಂ) ಅತ್ಯಂತ ಬಲಿಷ್ಠ ಎಡಶಕ್ತಿಯಾಗಿ ಬೆಳೆದಿದೆ. ಸಾಮ್ರಾಜ್ಯಶಾಹಿ, ಸಾಮಂತಶಾಹಿ ಮತ್ತು ಗುತ್ತೇದಾರಿ ಬಂಡವಲದಾರರ ವಿರುದ್ಧದ ಹೋರಾಟವನ್ನು ಪೂರ್ಣಗೊಳಿಸುವ ಉದ್ದೇಶ ಹೊಂದಿರುವ ಸಿಪಿಐ [ಎಂ], ಎಲ್ಲರ ಉದ್ದೇಶದ ಮುಂದುವರಿಕೆಗೆ, ಜನತಾ ಪ್ರಜಾಪ್ರಭುತ್ವದ ರಾಜ್ಯ ಸ್ಥಾಪನೆಗೆ ಎಲ್ಲ ಪ್ರಜಾಪ್ರಭುತ್ವವಾದಿ ಜನತೆಯನ್ನು ಒಗ್ಗೂಡಿಸುತ್ತಿದೆ.

ಸಿಪಿಐ (ಎಂ) ಸ್ಥಾಪನೆಯಾದಂದಿನಿಂದ, ಆಳುವ ಪಕ್ಷದ ವಿರುದ್ಧ, ತಪ್ಪು ಧೋರಣೆಗಳ ವಿರುದ್ಧ ವಿಶ್ವದ ಚಳುವಳಿಯ ಎಡ-ಬಲ ತಪ್ಪು ನಿಲುವುಗಳ ವಿರುದ್ಧ ನಿರಂತರ ಹೋರಾಡಬೇಕಾಯಿತು. ಆ ರೀತಿ ಮಾಡುವಾಗ ನಾವು ಜಗತ್ತಿನ ಕಮ್ಯೂನಿಸ್ಟ್ ಪಕ್ಷಗಳಿಂದ ಪ್ರತ್ಯೇಕಿಸಲ್ಪಟ್ಟೆವು. ಆದರೆ ಮಾರ್ಕ್ಸ್‌ವಾದ ಲೆನಿನ್‌ವಾದದ ಸಿದ್ಧಾಂತಗಳಿಗೆ ಅಂಟಿಕೊಂಡೇ ನಾವು ಮುಂದುವರಿದಿರುವುದರಿಂದ ಇಂದು ಜಗತ್ತಿನ ಹಲವಾರು ಕಮ್ಯೂನಿಸ್ಟ್ ಪಕ್ಷಗಳು ನಮ್ಮೊಡನೆ ಸಂಬಂಧ ಬೆಳೆಸಿವೆ.

ನಮ್ಮ ದೇಶದಲ್ಲಿ ಹಿರಿಬಂಡವಳಶಾಹಿ-ಭೂ ಮಾಲಕ ವರ್ಗದ ಪರ ನೀತಿಯ ಕಾಂಗ್ರೆಸ್ಸಿನ ವಿರುದ್ಧ ಹೋರಾಡಿದಾಗ ಅಪಾರ ಕಷ್ಟ-ನಷ್ಟಗಳನ್ನೂ ಅಮಾನುಷ ದಬ್ಬಾಳಿಕೆಗಳನ್ನೂ ಎದುರಿಸಬೇಕಾಯಿತು. ಆದರೆ ಅವುಗಳನ್ನೆಲ್ಲ ಎದುರಿಸಿ ನಮ್ಮ ಪಕ್ಷ ಬಲಿಷ್ಠವಾಗಿ ಬೆಳೆದು ನಿಂತಿದೆ. ಪಶ್ಚಿಮ ಬಂಗಾಲ, ತ್ರಿಪುರಗಳಲ್ಲಿ ಅಧಿಕಾರದಲ್ಲಿದೆ. ಪಾರ್ಟಿಯ ಮುಖಂಡತ್ವದಲ್ಲಿರುವ ಯುವಕರ, ವಿದ್ಯಾರ್ಥಿಗಳ, ರೈತರ ಮಹಿಳೆಯರ, ಕಾರ್ಮಿಕರ ಸಂಘಟನೆಗಳಲ್ಲಿಯ ಸದಸ್ಯತ್ವ ಹೆಚ್ಚಾಗಿ ಬೃಹದಾಕಾರವಾದ ಶಕ್ತಿಯಾಗಿ ಬೆಳೆದಿವೆ.

ದುಡಿಯುವ ಜನತೆಗಾಗಿ, ಪ್ರಜಾಪ್ರಭುತ್ವ ಹಕ್ಕಿಗಾಗಿ ಸಿಪಿಐ (ಎಂ) ಹೋರಾಡುತ್ತ ಬಂದಿದೆ. ಹೋರಾಟದಲ್ಲಿ ತ್ಯಾಗ, ಬಲಿದಾನ ಮಾಡಿದೆ. ಪಾರ್ಟಿಯ ಚರಿತ್ರೆ, ಹೋರಾಟ, ಪಾರ್ಟಿ ಕಾರ್ಯಕರ್ತರ ಬಲಿದಾನ, ತ್ಯಾಗಗಳನ್ನೆಲ್ಲ ನೋಡಿ ಎ. ಕೆ. ಗೋಪಾಲನ್ ಕಟ್ಟಡ ನಿಧಿಗೆ ಸಹಾಯ ಮಾಡಿ, ಅದನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ಇ. ಎಂ. ಎಸ್. ನಂಬೂದಿರಿಪಾದ್
ಪ್ರಧಾನ ಕಾರ್ಯದರ್ಶಿ
ಸಿಪಿಐ (ಎಂ) ಕೇಂದ್ರ ಸಮಿತಿ.

ರಾಜ್ಯ ಸಮಿತಿಯ ಕರೆ

ಎ. ಕೆ. ಗೋಪಾಲನ್ ಭವನ ಕಟ್ಟುವುದರ ಸಲುವಾಗಿ ಧನ ಸಹಾಯ ಮಾಡಬೇಕೆಂದು ಕೇಂದ್ರ ಸಮಿತಿಯು ವಿನಂತಿ ಮಾಡಿ ಕೊಂಡಿದ್ದು ಅದರ ಕಡೆ ಕರ್ನಾಟಕ ರಾಜ್ಯದ ಎಲ್ಲ ಪಾರ್ಟಿ ಸದಸ್ಯರ, ಕಾರ್ಮಿಕರ, ರೈತರ ವಿದ್ಯಾರ್ಥಿ-ಯುವ ಜನತೆಯ ಗಮನ ಸೆಳೆಯುತ್ತೇವೆ. ಅದರ ಮಹತ್ವವನ್ನು ಒತ್ತಿ ಹೇಳಲಿಚ್ಛಿಸುತ್ತೇವೆ.

ಮೇ 4 - 5 ರಂದು ಸೇರಿದ ನಮ್ಮ ರಾಜ್ಯ ಸಮಿತಿ ಸಭೆ ಎ. ಕೆ. ಗೋಪಾಲನ್ ಭವನಕ್ಕಾಗಿ ರಾಜ್ಯದಿಂದ ಆದಷ್ಟು ಹೆಚ್ಚು ನಿಧಿ ಸಂಗ್ರಹಿಸಿ ಕಳುಹಿಸಬೇಕೆಂದು ನಿರ್ಧರಿಸಿದೆ. ಸೆಕ್ರೆಟಾರಿಯೇಟ್ ಮತ್ತು ರಾಜ್ಯ ಸಮಿತಿ ಸದಸ್ಯರು ರೂ. 4000 ನಿಧಿಯನ್ನು ಸಭೆಯಲ್ಲೇ ಸೇರಿಸಿದ್ದಾರೆ ಅವರ ಹೆಸರುಗಳನ್ನು ಪ್ರತ್ಯೇಕ ಪ್ರಕಟಿಸಲಾಗಿದೆ.

ನಮ್ಮ ರಾಜ್ಯದಲ್ಲಿರುವ ಪ್ರತಿಯೊಬ್ಬ ಪಾರ್ಟಿ ಸದಸ್ಯನೂ ಶಕ್ತಿಮೀರಿ ತನ್ನ ಸ್ವಂತ ದೇಣಿಗೆ ಕೊಡುವುದಲ್ಲದೆ, ತನ್ನ ಗೆಳೆಯರಿಂದಲೂ, ತಾನು ಕೆಲಸ ಮಾಡುತ್ತಿರುವ ಸಾಮೂಹಿಕ ಸಂಘಟನೆಗಳ ಸದಸ್ಯರಿಂದಲೂ ಆದಷ್ಟು ಹೆಚ್ಚು ನಿಧಿ ಕೂಡಿಸಿ ಕೊಡಬೇಕಾಗಿ ವಿನಂತಿಸುತ್ತೇವೆ.

ತಮ್ಮ ಸಹಾಯ ಧನವನ್ನು ನೇರವಾಗಿ ದಿಲ್ಲಿಗೆ ಕಳುಹಿಸಬಹುದು ಅಥವ ರಾಜ್ಯ ಸಮಿತಿಗೂ ಕಳುಹಿಸಬಹುದು. ಅವರ ಹೆಸರುಗಳನ್ನು ಪೀಪಲ್ಸ್ ಡೆಮೋಕ್ರೆಸಿ ಮತ್ತು ಐಕ್ಯರಂಗ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಿಲ್ಲಿಯಿಂದ ನೇರವಾಗಿ ಅವರಿಗೆ ಪಾವತಿ ಕಳುಹಿಸಲಾಗುವುದು.

ಎಲ್ಲ ಚೆಕ್, ಡ್ರಾಫ್ಟ್ ಮನಿ ಆರ್ಡರ್‌ಗಳನ್ನು ಎ.ಕೆ. ಗೋಪಾಲನ್ ಭವನ ಟ್ರಸ್ಟ್, 14, ಅಶೋಕ ರೋಡ್, ನವದೆಹಲಿ. 110 001 ಈ ಪತ್ತೆಗೆ ಕಳುಹಿಸಬೇಕು. ಅಥವಾ ಬೆಂಗಳೂರು ಪಾರ್ಟಿ ಆಫೀಸಿಗೆ ಕಳುಹಿಸಬೇಕಾಗಿ ವಿನಂತಿ.

ಎಲ್ಲ ಪಾರ್ಟಿ ಸದಸ್ಯರೂ ಅತಿ ಹೆಚ್ಚು ನಿಧಿ ಸಂಗ್ರಹಿಸಿ ಪಾರ್ಟಿಯ ಪ್ರತಿಷ್ಠೆಯನ್ನು ಎತ್ತಿ ಹಿಡಿಯುತ್ತೀರೆಂದು ಆಶಿಸುತ್ತೇವೆ.

ಎ.ಕೆ. ಗೋಪಾಲನ್ ಭವನನಿಧಿಗೆ ಸಹಾಯ ಮಾಡಿದವರು- ಪಿ. ರಾಮಚಂದ್ರ ರಾವ್ ರೂ. 1000, ಎನ್.ಕೆ ಉಪಾಧ್ಯಾಯ ರೂ. 100, ಬೆಂಗಳೂರು ಕಾಮ್ರೇಡ್ಸ್ ರೂ. 1050, ವಿ. ಎನ್. ಹಳಕಟ್ಟಿ ರೂ 20, ಮಹಮ್ಮದ್ ಹಸನ್ ಖಾನ ರೂ 51, ಕೆ. ಆರ್. ನ್ಯಾಕ ರೂ 50, ದಸ್ತಗೀರ್ ರೂ 20, ಪಿ. ಕೆ. ಸುಬ್ರಮಣಿ ರೂ 20, ಎಂ. ಕೆ. ಭಟ್ ರೂ 50, ಎಂ. ಎನ್. ಉಗ್ರಪ್ಪ ರೂ 50, ಲಕ್ಷ್ಮಯ್ಯ ರೂ 50, ಅಬ್ರಹಂಕರ್ಕಡ ರೂ. 50, ಜನಾರ್ಧನ ನ್ಯಾಕ ರೂ25 ಟಿ.ಎಸ್. ಮಣಿ ರೂ, 20, ಸೂರ್ಯನಾರಾಯಣ ರಾವ್ ರೂ. 1000, ವಿ. ಜೆ. ಕೆ. ನಾಯರ್ ರೂ. 1000, ಸಿ. ನಂಜುಂಡಪ್ಪ ರೂ. 100

ಪಿ. ರಾಮಚಂದ್ರರಾವ್,
ಕಾರ್ಯದರ್ಶಿ,
ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ

ದಂತಾಗಿಲ್ಲ. ಆದರೆ ಗೇಣಿದಾರ ಪದ್ಧತಿಯ ಹೆಚ್ಚು ಕಡಿಮೆ ಇಲ್ಲದಂತಾಗಿದೆ. ಮೂಲಭೂತವಾಗಿ ಭೂಮಿಯ ಪ್ರಶ್ನೆಯು ಪರಿಹಾರವಾಗಬೇಕಾದರೆ ಮೊತ್ತ ಮೊದಲಾಗಿ 'ಭೂಮಿಯ ಪುನರ್ವಿತರಣೆ' ಮಾಡುವ ಕ್ರಾಂತಿಕಾರಿ ಭೂ ಸುಧಾರಣೆ ಆಗಬೇಕು. ಆದರೆ ಅಖಿಲ ಭಾರತ ಕಿಸಾನ್ ಸಭಾ ಮತ್ತು ಅದರ ಅಂಗವಾದ ಕರ್ನಾಟಕ ಪ್ರಾಂತ ರೈತ ಸಂಘವು ಹೇಳುವಂತೆ 'ಭೂಮಿಯ ಪುನರ್ವಿತರಣೆ' ಯ ಘೋಷಣೆಯು ಈಗ ಪ್ರಚಾರದ ಮತ್ತು ಭವಿಷ್ಯದಲ್ಲಿ ಕಾರ್ಯಗತಗೊಳಿಸಬಹುದಾದ ಘೋಷಣೆಯಾಗಿದೆ. ಆದರೆ ಸರಕಾರಿ ಬಂಜರು ಭೂಮಿಯನ್ನು ಭೂರಹಿತ ಬಡಜನರಿಗೆ ಹಂಚಬೇಕು, ಬಡಜನರ ಸ್ವಾಧೀನವಿರುವ ಸರಕಾರಿ ಭೂಮಿಯನ್ನು ಖಾಯಂಗೊಳಿಸಬೇಕು, ಭೂ ಸುಧಾರಣಾ ಕಾಯ್ದೆ ಜಾರಿಯಲ್ಲಾಗಿರುವ ಮೋಸಗಳನ್ನು ಸರಿಪಡಿಸಬೇಕು ಎಂಬಿತ್ಯಾದಿ ಭೂಮಿಗೆ ಸಂಬಂಧಿಸಿದ ಆಂಶಿಕ ಬೇಡಿಕೆಗಳ ಆಧಾರದಲ್ಲಿ ಜಿಲ್ಲೆಯಲ್ಲಿ ಸಂಘಟಿತ ಹೋರಾಟವನ್ನು ನಡೆಸಬಹುದು ಮತ್ತು ನಡೆಸಬೇಕಿದೆ. ಸರಕಾರಿ ಭೂಮಿಯಲ್ಲಿ ವಾಸಿಸುವ ಮತ್ತು ಅಲ್ಪ ಸ್ವಲ್ಪ ಸರಕಾರಿ ಭೂಮಿಯಲ್ಲಿ ಕೃಷಿ ಮಾಡಿ ಬದುಕುವ ಸಹಸ್ರಾರು ಮಂದಿ ಬಡ ಜನರಿಗೆ ಭೂಮಿಯ ಹಕ್ಕು ದೊರೆಯಬೇಕೆಂಬ ಬೇಡಿಕೆಯನ್ನು ಮುಂದಿಟ್ಟು ಜಿಲ್ಲೆಯಾದ್ಯಂತ ಸಾಮೂಹಿಕ ಕಾರ್ಯಾಚರಣೆ ನಡೆಸುವುದಕ್ಕೆ ಪ್ರಾರಂಭಿಸಲಾಗಿದೆ. ಇದಕ್ಕೆ ವ್ಯಾಪಕ ಬೆಂಬಲವೂ ದೊರೆತಿದೆ. ಹಿಂದೆ ಜಿಲ್ಲೆಯಲ್ಲಿ ಗೇಣಿದಾರ ರೈತರ ಸಾಮೂಹಿಕ ಹೋರಾಟವನ್ನು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಕೆಲವೆಡೆ ನಡೆಸಲಾಗಿತ್ತು. ಆ ಮೇಲೆ ಅಂದರೆ ಕಳೆದ ಒಂದು ದಶಕದಲ್ಲಿ ಸಾಮೂಹಿಕ ಪ್ರಶ್ನೆಯನ್ನು ಎತ್ತಿ ಹಿಡಿದು ಹೋರಾಡುವುದು ಸಾಧ್ಯವಾಗಿರಲಿಲ್ಲ. ಆದರೆ ಇದೀಗ ಸರಕಾರಿ ಭೂಮಿಯನ್ನು ಖಾಯಂಗೊಳಿಸಲು ಒತ್ತಾಯಿಸಿ ನಡೆಸಲಾಗುತ್ತಿರುವ ಹೋರಾಟವು ಪ್ರಾಂತ ರೈತ ಸಂಘಕ್ಕೆ ಒಂದು ಸಾಮೂಹಿಕ ನೆಲೆಯನ್ನು ಒದಗಿಸಿ ಕೊಟ್ಟಿದೆ. ಈ ಪ್ರಶ್ನೆ ಆಧಾರಿತವಾಗಿ ಪ್ರಬಲ ಚಳುವಳಿಗಳನ್ನು ನಡೆಸುವುದು ಸಾಧ್ಯವಿದೆ.

ಕೃಷಿ ಉತ್ಪನ್ನಗಳ ಬೆಲೆಯ ಪ್ರಶ್ನೆ

ದೇಶದಾದ್ಯಂತ ಮತ್ತು ರಾಜ್ಯದಾದ್ಯಂತ ಎಲ್ಲಾ ರೈತರನ್ನು ಕಾಡಿಸುತ್ತಿರುವ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಂಬಲಿತ ಬೆಲೆಯ ಪ್ರಶ್ನೆಯು ಈ ಜಿಲ್ಲೆಯ ಎಲ್ಲಾ ವಿಭಾಗದ ರೈತರನ್ನೂ ಬಾಧಿಸುತ್ತಿದೆ. ಕೃಷಿ ಕೂಲಿಗಾರರ ಪ್ರಶ್ನೆ ಮತ್ತು ಭೂಮಿಯ ಪ್ರಶ್ನೆಗಳನ್ನು ಮುಂದಿಟ್ಟು ಹೋರಾಡುವಾಗ ಕೃಷಿ ಉತ್ಪನ್ನಗಳಿಗೆ ನ್ಯಾಯವಾದ ಬೆಂಬಲಿತ ಬೆಲೆ ಸಿಗುವಂತೆಯೂ ಹೋರಾಡುವುದು ಅವಶ್ಯ. ಈ ದಿಸೆಯಲ್ಲಿ ಗಮನ ಮತ್ತು ಹೆಚ್ಚಿನ ಪ್ರಯತ್ನ ನಡೆಯಬೇಕು. ಈ ಪ್ರಶ್ನೆಯ ಕುರಿತು ಸಂಯುಕ್ತ ಕಾರ್ಯಕ್ರಮಗಳನ್ನು ರೂಪಿಸಿ ಕೊಳ್ಳುವುದು ಎಲ್ಲಾ ರೈತರನ್ನು ಭಾಗವಹಿಸುವಂತೆ ಮಾಡುವ ದೃಷ್ಟಿಯಿಂದ ಹೆಚ್ಚು ಉಪಯುಕ್ತವಾಗಬಹುದು. ಅಖಿಲ ಭಾರತ ಕಿಸಾನ್ ಸಭಾವು ತೆಗೆದುಕೊಂಡ ನಿಲುವೆಯನ್ನು ಅನುಸರಿಸಿ ಕರ್ನಾಟಕ ಪ್ರಾಂತ ರೈತ ಸಂಘವು ಕೃಷಿ ಉತ್ಪನ್ನಗಳ ಬೆಲೆಯ ಪ್ರಶ್ನೆಯನ್ನು ಎತ್ತಿ ಹಿಡಿದು ಈ ಜಿಲ್ಲೆಯಲ್ಲಿ ಕಾರ್ಯಕ್ರಮ ರೂಪಿಸಲು ಮುಂದಾಗಬೇಕು. ಈ ಎಲ್ಲದರೊಂದಿಗೆ ಗ್ರಾಮೀಣ ಜನತೆಗೆ ಸಂಬಂಧಿಸಿದ ಹಲವಾರು ಬೇಡಿಕೆಗಳ ಈಡೇರುವಿಕೆಗಾಗಿಯೂ ಹೋರಾಡಬೇಕು ಹಳ್ಳಿಯ ಬಡವರ ಮತ್ತು ರೈತರ ಎಲ್ಲ ಬೇಡಿಕೆಗಳು ಮತ್ತು ಹೋರಾಟಗಳಿಗೆ ಕಾರ್ಮಿಕ ವರ್ಗದ ಬೆಂಬಲವನ್ನು ಪಡೆಯುತ್ತಾ ಮುನ್ನಡೆದರೆ ರೈತ ಮತ್ತು ಕಾರ್ಮಿಕರ ಐಕ್ಯತೆಯನ್ನು ಸಾಧಿಸುವುದು ಸಾಧ್ಯ. ಈ ದಿಸೆಯಲ್ಲಿ ಸಂಘಟಿತ ಕಾರ್ಮಿಕ ವರ್ಗವು ಕಾರ್ಯೋನ್ಮುಖವಾಗುವಂತೆಯೂ ಮಾಡಬೇಕು.

(7ನೇ ಪುಟ ನೋಡಿ)

ಭೂಮಿಯ ಹಕ್ಕಿಗಾಗಿ ತೀವ್ರ ಹೋರಾಟ ನಡೆಸಲು ನಿರ್ಧಾರ

ಕರ್ನಾಟಕ ಪ್ರಾಂತ ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯು ಸಭೆಯು 27-4-84 ರಂದು ಮಂಗಳೂರಿನಲ್ಲಿ ಸೇರಿ ಸರಕಾರಿ ಭೂಮಿಯಲ್ಲಿ ವಾಸಿಸುವ ಮತ್ತು ಅಲ್ಪ ಸ್ವಲ್ಪ ಸರಕಾರಿ ಭೂಮಿಯಲ್ಲಿ ಕೃಷಿ ಮಾಡಿ ಬದುಕುತ್ತಿರುವ ಸಹಸ್ರಾರು ಬಡಜನತೆಯ ಭೂಮಿಯ ಹಕ್ಕಿಗಾಗಿ ಚಳುವಳಿಯನ್ನು ತೀವ್ರಗೊಳಿಸಲು ನಿರ್ಧರಿಸಿದೆ. ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿಯ ಅಧ್ಯಕ್ಷ ಕಾ. ಅಬ್ರಹಾಂ ಕರ್ಕಡ ಅವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಭೆಯ ಪ್ರಾರಂಭದಲ್ಲಿ ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾ. ಯು. ಜನಾರ್ಧನ್ ನಾಯಕ್ ಅವರು ಸಂಘಟನೆ ಮತ್ತು ಚಟುವಟಿಕೆಗಳ ಬಗ್ಗೆ ವರದಿ ಇತ್ತರು. ಪ್ರಾಂತ ರೈತ ಸಂಘದ ಮುಂದಾಳು ಕಾ. ಎಂ. ಕೆ. ಭಟ್ ಅವರು ಮಾತನಾಡುತ್ತಾ ಹಳ್ಳಿಯ ಬಡವರಿಗೆ ನ್ಯಾಯ ದೊರಕಿಸಿ ಕೊಡಲು ಸರಕಾರದ ಮೇಲೆ ಒತ್ತಾಯ ಹೇರುವುದಕ್ಕಾಗಿ ಮತ್ತು ರೆವಿನ್ಯೂ ಅಧಿಕಾರಿಗಳು ಹಳ್ಳಿಯ ಬಡ ಜನರಿಗೆ ಕೊಡುತ್ತಿರುವ ಕಿರುಕುಳ ಮತ್ತು ರೆವಿನ್ಯೂ ಇಲಾಖೆಯ ಭ್ರಷ್ಟಾಚಾರದ ವಿರುದ್ಧ ತೀವ್ರವಾದ ಚಳುವಳಿಯನ್ನು ನಡೆಸುವ ಅವಶ್ಯಕತೆ ಇದೆ ಎಂದರು.

ಸರಕಾರಿ ಜಾಗದಲ್ಲಿ ವಾಸಿಸುತ್ತಿರುವ ಬಡ ಜನರಿಗೆ ಅವರವರ ಸ್ವಾಧೀನವಿರುವ ಭೂಮಿಯನ್ನು ಅದು ಎಲ್ಲೇ ಇದ್ದರೂ ಅದನ್ನು ಖಾಯಂಗೊಳಿಸಲು ಕಾನೂನುಗಳಲ್ಲಿ ಬೇಕಾದ ತಿದ್ದುಪಡಿಗಳನ್ನು ತಂದು ಬಡ ಜನರ ಭೂಮಿಯನ್ನು ಖಾಯಂಗೊಳಿಸಲು ರಾಜ್ಯ ಸರಕಾರವು ನಿಧಾನ ಮಾಡುತ್ತಿರುವುದರ ವಿರುದ್ಧ ಹೋರಾಡಲು ಕರೆ ನೀಡಿದರು

ಜಿಲ್ಲೆಯ ಬೇರೆ ಬೇರೆ ತಾಲೂಕುಗಳ ಪರಿಸ್ಥಿತಿಗಳ ಬಗ್ಗೆ ವಿಮರ್ಶಿಸಿದ ಜಿಲ್ಲಾ ಸಮಿತಿಯು ಸರಕಾರಿ ಜಾಗದಲ್ಲಿ ವಾಸಿಸುತ್ತಿರುವ ಬಡ ಜನರ ಮೇಲೆ ಸಿಕ್ಕಾಪಟ್ಟೆ ದಂಡ ಹೇರಿ, ಅದನ್ನು ಬಲಾತ್ಕಾರವಾಗಿ ವಸೂಲಿ ಮಾಡುವ ರೆವಿನ್ಯೂ ಇಲಾಖೆಯ ಕ್ರಮವನ್ನು ಉಗ್ರವಾಗಿ ಖಂಡಿಸಿತು. ದಂಡ ವಸೂಲಿ ಬಾಕಿಗಾಗಿ ಜಪ್ತಿ ನೋಟಿಸು ಕೊಟ್ಟಿರುವುದನ್ನೂ ಉಗ್ರವಾಗಿ ಖಂಡಿಸಿದ ಜಿಲ್ಲಾ ಸಮಿತಿಯು ಆಗುವೆದಾರರಿಂದ ದಂಡ ವಸೂಲಿ ಮಾಡುವುದನ್ನೂ ಅವರ ಮೇಲೆ ಜಪ್ತೀ ಮಾಡುವುದನ್ನು ಕೂಡಲೇ ನಿಲ್ಲಿಸಬೇಕೆಂದು ಸರಕಾರವನ್ನು ಒತ್ತಾಯಿಸಿತು.

ಬಿಜಾಪುರದಲ್ಲಿ ರೈತರ ಬೃಹತ್ ಮೆರವಣಿಗೆ

ಏಪ್ರಿಲ್ 30 ರಂದು ಬಿಜಾಪುರದಲ್ಲಿ ರೈತರ ಬೃಹತ್ ಮೆರವಣಿಗೆ ನಡೆಯಿತು. ಸರ್ಕಾರಿ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವ ರೈತರಿಗೆ ಭೂಮಿಯನ್ನು ಮಂಜೂರು ಮಾಡಿ ಪಟ್ಟಾ ಕೊಡಬೇಕು, ರೈತರು ಬೆಳೆದ ಬೆಳೆಗೆ ಯೋಗ್ಯ ಬೆಲೆ ಸಿಗಬೇಕು, ಬಿಜಾಪುರದ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಗೊಳಿಸಿ ಅಲ್ಲಿನ ನಿವಾಸಿಗಳಿಗೆ ಮನೆ ಕಟ್ಟಿಸಿಕೊಡಬೇಕು, ಸರ್ಕಾರದ ಭೂಹೀನರಿಗೆ ಹಂಚಿದ ಭೂಮಿಯನ್ನು ಅವರಿಗೇ ಖಾಯಂಗೊಳಿಸಬೇಕು ಮುಂತಾದ ಬೇಡಿಕೆಗಳಿಗಾಗಿ ಒತ್ತಾಯಿಸಿ ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ, ಹಳ್ಳಿ ಹಳ್ಳಿಗಳಿಂದ ಜಾಥಾದ ಮೂಲಕ, ಬಸ್ಸುಗಳಲ್ಲಿ ಬಂದ ರೈತರು 30 ರ ಮುಂಜಾನೆ 11 ಗಂಟೆಗೆ ರೈತ ಸಂಘದ ಕಾರ್ಯಾಲಯದಿಂದ ಮೆರವಣಿಗೆಯಲ್ಲಿ ಹೊರಟು ನಗರದ ಮುಖ್ಯ ಬೀದಿಗಳಲ್ಲಿ ಘೋಷಣೆ ಕೂಗುತ್ತಾ ಸಂಚರಿಸಿ ಜಿಲ್ಲಾಧಿಕಾರಿ ಕಚೇರಿಯನ್ನು ತಲುಪಿದರು.

ಮೆರವಣಿಗೆಯ ನೇತೃತ್ವವನ್ನು ಕಾಮ್ರೇಡುಗಳಾದ ಭೀಮಸಿ ಕಲಾದಗಿ, ವಿ. ಎಂ. ಸೊನ್ನದ, ಚಂದ್ರಕಾಂತ್ ಚಟ್ಟೇರಗಿ, ಸಿ. ಬಿ. ಮಣ್ಣೂರ ಹೊನ್ನಟಗಿ, ಎಂ. ಬಿ. ಶೇಖ್ ಎ. ಡಿ. ಹಳ್ಳಿ, ಲಾಲಕೋಟ ಸೋಲಾಪುರ ಮುಂತಾದವರು ವಹಿಸಿದ್ದರು.

ಜಿಲ್ಲಾಧಿಕಾರಿಯವರಿಗೆ ಬೇಡಿಕೆಗಳನ್ನೊಳಗೊಂಡ ಮನವಿಯನ್ನು ಅರ್ಪಿಸಿ ಬೇಡಿಕೆಗಳು ಈಡೇರದಿದ್ದಲ್ಲಿ ರಸ್ತಾ ರೋಕೋ, ಜೇಲ್ ಭರೋ, ಚಳುವಳಿಗಳನ್ನು ನಡೆಸಬೇಕಾಗುತ್ತದೆಂದು ಕಾ. ಭೀಮಸಿ ಕಲಾದಗಿ ಅವರು ಸರಕಾರಕ್ಕೆ ಎಚ್ಚರಿಸಿದ್ದಾರೆ

ಸಂತಾಪ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಮಂಗಳೂರು ತಾಲ್ಲೂಕಿನ ಜಪ್ಪಿನಮೊಗರು ಗ್ರಾಮದ ಶಾಖೆಯ ಸದಸ್ಯರಾದ ಕಾಂ. ಜಿ. ಚಂದ್ರಹಾಸನವರ ತಂದೆಯವರಾದ ಶ್ರೀ ಬಾಲು ಕೊಟ್ಯಾರಿಯವರು ತಮ್ಮ 55 ನೇ ವಯಸ್ಸಿನಲ್ಲಿ 13-3-85 ರಂದು ನಿಧನರಾದರು ಶ್ರೀಯುತರು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಹಿತೈಷಿಯೂ ಸಿ.ಐ.ಟಿ.ಯು. ಸದಸ್ಯರೂ ಆಗಿದ್ದರು ಈ ಬಗ್ಗೆ ಜಪ್ಪಿನಮೊಗರು ಶಾಖೆಯು ಸಭೆ ಸೇರಿ ದಿವಂಗತರ ನಿಧನಕ್ಕೆ ಸಂತಾಪವನ್ನು ವ್ಯಕ್ತಪಡಿಸಿದೆ.

ಹೂವಿನ ಹಡಗಲಿಯಲ್ಲಿ ಭೂ ಹೀನರ ಸತ್ಯಾಗ್ರಹ

ದಿನಾಂಕ 1-5-84 ರಿಂದ ಹಡಗಲಿಯಲ್ಲಿ ಭೂಹೀನರ ಉಪವಾಸ ಸತ್ಯಾಗ್ರಹ ನಡೆದು ದಿನಾಂಕ 4-5-84 ರಂದು ಕೊನೆಗೊಂಡಿತು. ದಿನಾಂಕ 3-4-84 ರಂದು ಮಾನ್ಯ ಸಾರಿಗೆ ಸಚಿವ ಶ್ರೀ ಎಂ. ಪಿ. ಪ್ರಕಾಶ್ ರವರು ಸತ್ಯಾಗ್ರಹಿಗಳನ್ನು ಚರ್ಚೆಗೆ ಕರೆದು ಸಮಸ್ಯೆಗಳನ್ನು ಕೂಲಂಕುಶವಾಗಿ ಚರ್ಚಿಸಿ ತುರ್ತು ಪರಿಹಾರ ನೀಡುವುದಾಗಿ ಹೇಳಿ ಚಳುವಳಿಯನ್ನು ಹಿಂತೆಗೆದುಕೊಳ್ಳಬೇಕೆಂದು ಸತ್ಯಾಗ್ರಹಿಗಳಿಗೆ ಮನವಿ ಮಾಡಿಕೊಂಡರು.

ದಿನಾಂಕ 4-5-84 ರಂದು ಸ್ಥಳೀಯ ಅಧಿಕಾರಿಗಳೂ ಚರ್ಚೆಗೆ ಕರೆದಿದ್ದರು ಈ ಚರ್ಚೆಯಲ್ಲಿ ಸುಮಾರು 10 ಪ್ರತಿನಿಧಿಗಳು ಭಾಗವಹಿಸಿದ್ದರು. ಸ್ಪ್ರಿಂಕ್ಲೇರ್ ಸಮಸ್ಯೆಯಲ್ಲಿ ತುಂಕುರು ನೀರಾವರಿ ಯೋಜನೆ, ಭ್ರಷ್ಟಾಚಾರ ನಡೆಸಿದವರ ಮೇಲೆ ತೀವ್ರ ಕ್ರಮ ಕೈಗೊಳ್ಳಬೇಕು ಮತ್ತು ಈ ನಷ್ಟದೊಂದಿಗೆ ರೈತರಿಗೆ ಪರಿಹಾರಧನ ಕೊಡಬೇಕು, ಎಂದು ಕೇಳಿಕೊಳ್ಳಲಾಯಿತು. ಅನೇಕ ರೈತರು ಪಿಎಲ್‌ಡಿ ಬ್ಯಾಂಕಿನಲ್ಲಿ ನಡೆದ ಅಕ್ರಮಗಳಿಗೆ ಬೇಸತ್ತು ರೈತಸಂಘಕ್ಕೆ ಮನವಿ ಬರೆದು ಕೊಂಡಿದ್ದು ಇದರ ಬಗ್ಗೆ ನೀವು ತೀವ್ರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲಾಯಿತು.

ಅದೇ ದಿನ ಸಂಜೆ ರೈತರ ಬೃಹತ್ ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಹಾದು ಸತ್ಯಾಗ್ರಹದ ಸ್ಥಳಕ್ಕೆ ತಲುಪಲಾಯಿತು. ನಂತರ ಬಹಿರಂಗ ಸಭೆ ನಡೆಯಿತು ಸಭೆಯನ್ನು ಉದ್ದೇಶಿಸಿ ಕಾಂ. ಆರ್. ಪೂರ್ಯಾ ನಾಯ್ಕ, ಹೊಚ್ಚಾನಾಯಕ ಮಾತನಾಡಿದರು "ಸಚಿವರ ಮತ್ತು ಅಧಿಕಾರಿಗಳ ದೃಢವಾದ ಹೇಳಿಕೆ ಮೇರೆಗೆ ಸತ್ಯಾಗ್ರಹವನ್ನು ನಿಲ್ಲಿಸಲಾಗಿದೆ ಮತ್ತೇ ಹಿಂದಿನಂತೇ ಇವರ ಹೇಳಿಕೆಗಳು ಸುಳ್ಳಾದ್ದಲ್ಲಿ ಉಗ್ರ ಚಳುವಳಿಗೆ ಸಿದ್ಧ" ವೆಂದು ಬಹಿರಂಗ ಸಭೆಯಲ್ಲಿ ಘೋಷಿಸಲಾಯಿತು.

ಕುಂದಾಪುರ

ಡಿ. ವೈ. ಎಫ್. ಐ. ಸಭೆ

ಏಪ್ರಿಲ್ 29 ರಂದು ಕಂದಾವರ ಗ್ರಾಮ ಡಿವೈಎಫ್‌ಐ ಯ ದ್ವಿತೀಯ ವಾರ್ಷಿಕ ಮಹಾಸಭೆಯು ಯುವಜನ ಮುಂದಾಳು ಕಾಂ। ಮುಕುಂದನ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಗೆ ಮುಖ್ಯ ಅತಿಥಿಯಾಗಿ ಕುಂದಾಪುರ ತಾಲ್ಲೂಕು ಡಿ. ವೈ. ಎಫ್. ಐ. ಅಧ್ಯಕ್ಷರಾದ ಕಾಂ। ಶಂಕರ ಖಾರ್ವಿಯವರು ಆಗಮಿಸಿದ್ದರು ಪ್ರಾರಂಭದಲ್ಲಿ ಸ್ಥಳೀಯ ಡಿ. ವೈ. ಎಫ್. ಐ. ಕಾರ್ಯದರ್ಶಿಗಳಾದ ಶ್ರೀಯುತ ಗೋವಿಂದ ಪೂಜಾರಿಯವರು ಸ್ವಾಗತಿಸಿದರು. ಶ್ರೀಯುತ ಶಿವ ಪೂಜಾರಿಯವರು ಧನ್ಯವಾದವನ್ನಿತ್ತರು ಸಭೆಯು ಸರ್ವಾನುಮತಿಯಿಂದ ಈ ಕೆಳಗಿನ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿತು.

ಶ್ರೀಯುತರುಗಳಾದ ಲಾರೆನ್ಸ್ ಬರೆಟ್ಟೊ [ಅಧ್ಯಕ್ಷ], ರಾಘವೇಂದ್ರ ಎಸ್. [ಕಾರ್ಯದರ್ಶಿ], ಗೋವಿಂದ ಪೂಜಾರಿ (ಉಪಾಧ್ಯಕ್ಷ), ಪ್ರವೀಣ್ (ಉಪಾಧ್ಯಕ್ಷ), ಎಸ್. ಶ್ರೀಧರ (ಜೊತೆ ಕಾರ್ಯದರ್ಶಿ), ಗೋವಿಂದ ರಾಜ್ (ಜೊತೆ ಕಾರ್ಯದರ್ಶಿ), ಜನಾರ್ಧನ ಪಿ (ಕ್ರೀಡಾ ಕಾರ್ಯದರ್ಶಿ), ಎಸ್. ಶಿವರಾಮ (ಕ್ರೀಡಾ ಕಾರ್ಯದರ್ಶಿ), ಗಣಪತಿ ಎಸ್, ಗೋವಿಂದ ಎಸ್, ಉರ್ಬನ್ ಡಿಸೋಜ, ಡೇನಿಸ್, ಸುಬ್ಬಯ, ಸುಬ್ರಾಯ ಎಸ್, ಬಾಬು ಎಸ್, ಚಂದ್ರಶೇಖರ್, ಶೇಖರ್ ಕೋಣಿ, ಅನಂತ ಕೆ. ಎಚ್ ತೇಜಪ್ಪ ಶೆಟ್ಟಿ, ಕೃಷ್ಣ ಎಸ್, ಎಮ್ ಗೋಪಾಲ ಎಮ್. ನಾರಾಯಣ, ಜನಾರ್ಧನ ಎಸ್, ಎಮ್. ಭೋಜ ಪೂಜಾರಿ. ಆಯ್ಕೆಯಾದರು.

ಬೆಂಗಳೂರು

ಮೈಸೂರು ವೈನ್ಸ್ ಕಾರ್ಮಿಕರ ಹೋರಾಟ ಮುಕ್ತಾಯ

ಕಳೆದ ಆಗಸ್ಟ್‌ನಲ್ಲಿ ಸಿ.ಐ.ಟಿ.ಯು. ನೇತೃತ್ವದಲ್ಲಿ ಸಂಘಟಿತರಾದ ಮೈಸೂರು ರಸ್ತೆಯಲ್ಲಿರುವ ಮೈಸೂರು ವೈನ್ಸ್ ಕಾರ್ಮಿಕರು ತುಟ್ಟಿಭತ್ಯೆಯ ಬೇಡಿಕೆಯನ್ನು ಮಾಲಿಕರ ಮುಂದೆ ಇರಿಸಿದರು. ಇದನ್ನು ಅಂಗೀಕರಿಸದ ಆಡಳಿತ ವರ್ಗ ಅನೇಕ ಕಾರ್ಮಿಕ ಮುಖಂಡರಿಗೆ ಶೋಕಾಸ್ ನೋಟೀಸ್ ನೀಡಿದರು. ನಂತರ ಡಿಸೆಂಬರ್ 22 ರಿಂದ ಬೀಗಮುದ್ರೆ ಮಾಡಿದ್ದರು. ಅದರೆ ಇದರ ವಿರುದ್ಧ ಹೋರಾಟ ನಡೆಸಿದ ಕಾರ್ಮಿಕರು ಸಂಘ ಮುರಿಯುವ ಆಡಳಿತ ವರ್ಗದ ಪ್ರಯತ್ನಗಳನ್ನು ಮುರಿದರು ಕೊನೆಗೆ ಸೋಲೊಪ್ಪಿದ ಆಡಳಿತ ವರ್ಗ 16-4-84 ರಂದು ಕಾರ್ಮಿಕ ಅಧಿಕಾರಿಗಳ ಮುಂದೆ ಒಂದು ಒಪ್ಪಂದ ಮಾಡಿಕೊಂಡಿತು ಅದರ ಪ್ರಕಾರ ತಾತ್ಕಾಲಿಕ ಪರಿಹಾರವಾಗಿ ಪ್ರತಿ ಕಾರ್ಮಿಕರಿಗೆ ತಿಂಗಳಿಗೆ 75 ರೂ ಕೊಡುವುದು. ಬೇರೆಲ್ಲಾ ವಿವಾದಗಳನ್ನು ನ್ಯಾಯಾಲಯಕ್ಕೆ ಒಪ್ಪಿಸುವುದು ಎಂದು ತೀರ್ಮಾನಿಸಲಾಗಿದೆ.

ವಿಮಾ ನೌಕರರ ಅಧ್ಯಯನ ಶಿಬಿರ

ಏಪ್ರಿಲ್ 29 ಮತ್ತು 30 ರಂದು ಮೈಸೂರಿನಲ್ಲಿ ವಿಮಾ ಕಾರ್ಪೊರೇಶನ್ ನೌಕರರ ಸಂಘದ ಬೆಂಗಳೂರು ವಿಭಾಗದ ಆಶ್ರಯದಲ್ಲಿ ವಿಮಾ ನೌಕರರಿಗೆ ಕಾರ್ಮಿಕ ಸಂಘಟನೆಯ ಬಗ್ಗೆ ಅಧ್ಯಯನ ಶಿಬಿರ ನಡೆಸಲಾಯಿತು.

ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಕಾರ್ಯದರ್ಶಿ ಕಾಂ. ವಿ. ಜೆ. ಕೆ. ನಾಯರ್ ಮತ್ತು ದಕ್ಷಿಣ ವಲಯ ವಿಮಾ ನೌಕರರ ಉಪಾಧ್ಯಕ್ಷರೂ ಸಿ.ಐ.ಟಿ.ಯು ರಾಜ್ಯ ಕಾರ್ಯದರ್ಶಿಗಳೂ ಆಗಿರುವ ಕಾಂ. ಬಿ. ಮಾಧವ ರವರು ಅಧ್ಯಯನ ಶಿಬಿರದಲ್ಲಿ ಉಪನ್ಯಾಸ ಮಾಡಿದರು.

ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ

ಏಪ್ರಿಲ್ 30 ರ ಸಂಜೆ ವಿಮಾ ನೌಕರರ ಸಭೆಯನ್ನುದ್ದೇಶಿಸಿ ಅಖಿಲ ಭಾರತ ವಿಮಾ ನೌಕರರ ಸಂಘದ [ಎಐಐಇಎ] ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಸರೋಜ್ ಚೌದುರಿ ಮತ್ತು ಕಾಂ. ಬಿ. ಮಾಧವ ರವರು ಭಾಷಣ ಮಾಡಿ ಜೂನ್ ತಿಂಗಳ ಮೊದಲ ವಾರದಲ್ಲಿ ರಾಷ್ಟ್ರದಾದ್ಯಂತ ಜೀವವಿಮಾ ನೌಕರರು ತಮ್ಮ ಹಲವಾರು ಬೇಡಿಕೆಗಳನ್ನು ಒತ್ತಾಯಿಸಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಿದ್ದು ಅದರ ಯಶಸ್ಸಿಗಾಗಿ ದುಡಿಯಲು ಕರೆ ನೀಡಿದರು.

ವಿಮಾ ಕಾರ್ಪೊರೇಷನ್ ನೌಕರರ ಸಂಘದ ಉಪಾಧ್ಯಕ್ಷರಾದ ಕಾಂ ಎನ್. ಆರ್ ಲಕ್ಷ್ಮಿಕಾಂತ್ ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಕೋಣಿ ಡಿ.ವೈ.ಎಫ್.ಐ. ಪದಾಧಿಕಾರಿಗಳು

ಭಾರತ ಪ್ರಜಾಸತಾತ್ಮಕ ಯುವಜನ ಫೆಡರೇಶನ್. ನ ಕೋಣಿ ಘಟಕದ 8 ನೇ ವಾರ್ಷಿಕ ಮಹಾಸಭೆ 1-4-84 ರಂದು ಜರುಗಿತು. 1984-85 ರ ಸಾಲಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಿತು.

ಕೆ. ಎನ್. ಸಂಜೀವ. ಅಧ್ಯಕ್ಷ. ಕೆ. ರಾಜೀವ ಶೆಟ್ಟಿ ಬಾಬು ಕೆ. ಉಪಾಧ್ಯಕ್ಷರು ಕೆ. ನಾರಾಯಣ ಆಚಾರ' ಕಾರ್ಯದರ್ಶಿ ರಾಜು ಜಿ. ಜೊತೆ ಕಾರ್ಯದರ್ಶಿ ಚಂದ್ರ, ಕೆ. ಸಂಜೀವ ಕೆ. ಕ್ರೀಡಾ ಕಾರ್ಯದರ್ಶಿಗಳು ಒಟ್ಟು 15 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರುಗಳನ್ನು ಆಯ್ಕೆ ಮಾಡಲಾಯಿತು.

ಬೀಡಿ ಕಾರ್ಮಿಕರಿಂದ ಸತ್ಯಾಗ್ರಹ

ತಾ. 28-4-1984 ನೇ ಶನಿವಾರ ಸುಳ್ಯ ತಾಲ್ಲೂಕು ಬೀಡಿ ಕೆಲಸಗಾರರ ಸಂಘದ (ಸಿಐಟಿಯು) ಆಶ್ರಯದಲ್ಲಿ ಬೀಡಿ ಕಾರ್ಮಿಕರಿಂದ ಅಡ್ಕಾರು ಎಂಬಲ್ಲಿರುವ ದೀಪಕ್ ಬೀಡಿ ಡಿಪೋದ ಎದುರು ಸತ್ಯಾಗ್ರಹವನ್ನು ನಡೆಸಲಾಯಿತು. ಬೀಡಿ ಕಾರ್ಮಿಕರಿಗೆ ಕಾನೂನಿನ ಸವಲತ್ತುಗಳನ್ನು ಕೊಡದೆ ಕಂಟ್ರಾಕ್ಟರ್‌ಗಳು ಮಾಡುವ ಮೋಸದ ವಿರುದ್ಧ ಈ ಸತ್ಯಾಗ್ರಹವನ್ನು ಏರ್ಪಡಿಸಲಾಗಿತ್ತು. ನೂರಾರು ಕಾರ್ಮಿಕರು ಸುಳ್ಯದಿಂದ 8 ಮೈಲು ದೂರವಿರುವ ಅಡ್ಕಾರಿಗೆ ನಡೆದು ಕೊಂಡೇ ಹೋಗಿ ಸತ್ಯಾಗ್ರಹ ನಡೆಸಿದರು. ಕಂಪೆನಿಯಿಂದ ನೀಡುವ ಸಂಬಳದಲ್ಲಿ ಕಂಟ್ರಾಕ್ಟರ್ ಮಾಡುವ ಮೋಸ, ಎಲೆ ಎವರೇಜ್ ಬೋನಸ್‌ನಲ್ಲಿ ನಡೆದ ಮೋಸ ವೇಜ್ ಸ್ಲಿಪ್, ಲೋಗ್ ಪುಸ್ತಕದಲ್ಲಿ ಆಗುವ ಮೋಸ ಐಡೆಂಟಿಟಿ ಕಾರ್ಡ್ ಇವೇ ಮುಂತಾದುವುಗಳು ಮುಖ್ಯ ಬೇಡಿಕೆಗಳಾಗಿದ್ದವು.

ಸತ್ಯಾಗ್ರಹದ ನೇತೃತ್ವವನ್ನು ಬೀಡಿ ಕಾರ್ಮಿಕರ ಸಂಘದ ಅಧ್ಯಕ್ಷ ಕಾ। ಸೂರ್ಯನಾರಾಯಣ ಭಟ್, ಕಾರ್ಯದರ್ಶಿ ಕಾ। ಪಕೀರ ಪಾಟಾಳಿ ಕಾ। ಮೋನಪ್ಪಗೌಡ ಕಾ। ಬಾಲಕೃಷ್ಣ ಗೌಡ, ಕಾ। ಭಾಸ್ಕರ ರಾವ್, ಕಾ। ಪದ್ಮಾವತಿ ರೈ, ಕಾ। ಜಾನಕಿ ಮುಂತಾದವರು ವಹಿಸಿದ್ದರು.

ಸುಳ್ಯ ಸಬ್ ಇನ್ಸ್‌ಪೆಕ್ಟರ್ ಶ್ರೀ ಕಾಂಬ್ಳೆಯವರ ಹಾಜರಿಯಲ್ಲಿ ಕೂಡಲೇ ಒಂದು ಮಾತುಕತೆಯನು ಏರ್ಪಾಡು ನಡೆಸಲು ತೀರ್ಮಾನಿಸಿದ ನಂತರ ಸತ್ಯಾಗ್ರಹವನ್ನು ಕೊನೆಗೊಳಿಸಲಾಯಿತು.

ಬೆಂಗಳೂರು

ಬೀಡಿ ಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆ

29-4-84 ರಂದು ಮಂಗಳೂರು ಬೀಡಿ ಕೆಲಸಗಾರರ ಸಂಘದ 20 ನೇ ವಾರ್ಷಿಕ ಮಹಾಸಭೆಯು ಬೋಳಾರದಲ್ಲಿರುವ ಎಸ್. ಕೆ. ಟೈಲ್ ವರ್ಕರ್ಸ್ ಯೂನಿಯನಿನ ಕಛೇರಿಯಲ್ಲಿ ಸೇರಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಲೋಕಯ್ಯ ಶೆಟ್ಟಿಯವರು ವಹಿಸಿದ್ದರು. ಪ್ರಾರಂಭದಲ್ಲಿ ಕಾರ್ಯದರ್ಶಿ ಜೆ ವೀರಪ್ಪ ಅವರು ಸಂಘದ ವರದಿಯನ್ನು ಮಂಡಿಸಿದರು. ಕೋಶಾಧಿಕಾರಿ ಪಿ. ಕಮಲಾಕ್ಷ ಬಂಗೇರರವರು ಸಂಘದ ವಾರ್ಷಿಕ ಲೆಕ್ಕ ಪತ್ರವನ್ನು ಮಂಡಿಸಿದರು. ವಾರ್ಷಿಕ ವರದಿಯನ್ನು, ಲೆಕ್ಕ ಪತ್ರವನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. ಸಭೆಗೆ ಆಗಮಿಸಿದ ಉಳ್ಳಾಲದ ಶಾಸಕರಾದ ಪಿ. ರಾಮಚಂದ್ರರಾವ್ ಮಾತನಾಡುತ್ತಾ, ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಬೀಡಿ ಕಾರ್ಮಿಕರು ಸಂಘಟನೆಯಾಗುವಂತಹ ಅವಶ್ಯಕತೆಯನ್ನು ಹೇಳಿದರು. ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಯು. ಜನಾರ್ಧನ ನ್ಯಾಕ್‌ರವರು ಮಾತನಾಡುತ್ತಾ ರೈತ ಕಾರ್ಮಿಕರು ಜಂಟಿಯಾಗಿ ತಮ್ಮ ತಮ್ಮ ಸಮಸ್ಯೆಗಳ ಬಗ್ಗೆ ಹೋರಾಟ ಮಾಡಬೇಕೆಂದು ಹೇಳಿದ್ದರು. ಕೊನೆಗೆ ನೂತನ ಸಮಿತಿಯನ್ನು ಸರ್ವಾನುಮತದಿಂದ ಆರಿಸಲಾಯಿತು ನೂತನ ಸಭೆಯು ಪದಾಧಿಕಾರಿಗಳನ್ನಾಗಿ

1. ಲೋಕಯ್ಯ ಶೆಟ್ಟಿ ಅಧ್ಯಕ್ಷ, 2 ನಾರಾಯಣ ರಾವ್ ಮತ್ತು ಬಾಲಕೃಷ್ಣ ಶೆಟ್ಟಿ, ಬಾಬುಶೆಟ್ಟಿ : ಉಪಾಧ್ಯಕ್ಷರುಗಳು. 3. ಜೆ. ವೀರಪ್ಪ : ಕಾರ್ಯದರ್ಶಿ. ಕೃಷ್ಣ ಶೆಟ್ಟಿ, ರಾಜೇಂದ್ರ, ಕೊರಗಪ್ಪ ರೈ : ಜತೆ ಕಾರ್ಯದರ್ಶಿಗಳು. 4. ಕಮಲಾಕ್ಷ ಬಂಗೇರ : ಕೋಶಾಧಿಕಾರಿ. ಅಲ್ಲದೆ 30 ಸದಸ್ಯರನ್ನು ಒಳಗೊಂಡ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಕೃಷಿ ಕೂಲಿಗಾರರ ಸಂಘಟನೆಯ ಅವಶ್ಯಕತೆ

(5ನೇ ಪುಟದಿಂದ)

ಪ್ರತ್ಯೇಕತೆ

ಈ ಜಿಲ್ಲೆಯ ಪ್ರತ್ಯೇಕತೆಯು ಹಲವು ಸಂದರ್ಭಗಳಲ್ಲಿ ಕಂಡು ಬಂದಿದೆ. ಭಾಷೆಯ ಚಳುವಳಿ, ರಾಜ್ಯದಾದ್ಯಂತ ಇತ್ತೀಚಿನ ವರ್ಷಗಳಲ್ಲಿ ಬೆಳೆದು ಬಂದ ರೈತ ಚಳುವಳಿ – ಇವಾವುದರ ಬಿಸಿ ಈ ಜಿಲ್ಲೆಗೆ ತಟ್ಟಿರಲಿಲ್ಲ. ರುದ್ರಪ್ಪ ಮತ್ತು ಅವರ ಸಂಗಡಿಗರು ಈ ಜಿಲ್ಲೆಯಲ್ಲಿ ತಮ್ಮ ಸಂಘಟನೆ ಮತ್ತು ಚಳುವಳಿಗಳನ್ನು ನಡೆಸಲು ಪ್ರಯತ್ನಿಸಿ ವಿಫಲರಾಗಿರುವರು. ಇವರ ಪ್ರಯತ್ನವು ವಿಫಲವಾಗಿರುವುದಕ್ಕೆ ಒಂದು ಕಾರಣ ಎಂದರೆ ಬಹುಶಃ ಭಾಜಪದವರೇ ಅವರ ಸಂಘಟನೆಯಲ್ಲಿ ತುಂಬಿ ಕೊಂಡಿದ್ದು ಇರಬಹುದು. ವ್ಯಾಪಾರಿ ವರ್ಗದ ಬೆಂಬಲದಿಂದ ಬದುಕಿ ಬೆಳೆದಿರುವ ಬಾಜಪವು ಅದೇ ವರ್ಗದವರಿಂದಲೂ ಸುಲಿಗೆಗೆ ಒಳಗಾಗಿರುವ ರೈತರ ಕೃಷಿ ಉತ್ಪನ್ನಗಳಿಗೆ ನ್ಯಾಯವಾದ ಬೆಲೆಯಂತಹ ಬೇಡಿಕೆಗಳಿಗೆ ಬೆಂಬಲಿಸಿ ಹೋರಾಡುವುದು ಸಾಧ್ಯವಾಗಲಾರದು. ಈ ಜಿಲ್ಲೆಯ ಮುಖ್ಯ ಹಣದ ಬೆಳೆಯಾದ ಅಡಿಕೆಯು ನೇರವಾಗಿ ದೊಡ್ಡ ಉದ್ಯಮಗಳಿಗೆ ಕಚ್ಚಾ ವಸ್ತು ಆಗಿರದೆ ಇರುವುದರಿಂದಲೂ, ಅಡಿಕೆ ಬೆಳೆಯುವುದಕ್ಕೆ ತಗಲುವ ವೆಚ್ಚ ಮತ್ತು ಬೆಳೆಗೆ ದೊರೆಯುವ ಬೆಲೆಯೊಳಗಿನ ಅಂತರವು ಬಹುಶಃ ಹತ್ತಿ, ಕಬ್ಬು, ತಂಬಾಕು ಮೊದಲಾದವುಗಳನ್ನು ಬೆಳೆಸುವ ವೆಚ್ಚ ಮತ್ತು ದೊರೆವ ಬೆಲೆಯ ಅಂತರದಷ್ಟಿಲ್ಲವಾದುದರಿಂದಲೂ, ಈ ಜಿಲ್ಲೆಯು ಈ ಮೊದಲೇ ಹೇಳಿರುವಂತೆ ಒಂದು ರೀತಿಯ ಪ್ರತ್ಯೇಕತೆಯನ್ನು ಹೊಂದಿರುವುದರಿಂದಲೂ ಮಲಪ್ರಭಾ ಚಳುವಳಿಯಿಂದೀಚೆಗೆ ಬೆಳೆದು ಬಂದ ಚಳುವಳಿಯ ಕಾವು ಇಲ್ಲಿಗೆ ತಾಗಿಲ್ಲ. ಈ ಜಿಲ್ಲೆಯ ಒಂದು ರೀತಿಯ ಪ್ರತ್ಯೇಕತೆಗೆ ಚಾರಿತ್ರಿಕ – ಸಾಮಾಜಿಕ, ಆರ್ಥಿಕ, ರಾಜಕೀಯ, ಮತ್ತು ಆಡಳಿತಾತ್ಮಕ ಹಿನ್ನೆಲೆಗಳು ಕಾರಣವಿರಬಹುದು. ಹಾಗೆಂದಾಕ್ಷಣ ಪರಿಸ್ಥಿತಿಯನ್ನು ಹೀಗೆಯೇ ಉಳಿಸಬೇಕೆಂದಲ್ಲ. ಅಖಿಲ ಭಾರತ ಮತ್ತು ರಾಜ್ಯದ ದೃಷ್ಟಿಕೋನವನ್ನು ಹೊಂದಿರುವ ಕರ್ನಾಟಕ ಪ್ರಾಂತ ರೈತ ಸಂಘವು ಹಳ್ಳಿಯ ಬಡವರ ಆಧಾರಿತವಾಗಿ ಎಲ್ಲಾ ರೈತರ ಒಗ್ಗಟ್ಟು ಮತ್ತು ಹೋರಾಟವನ್ನು ಈ ಮೊದಲು ಹೇಳಿರುವ ದಿಶೆಯಲ್ಲಿ ಬೆಳೆಸಿದರೆ ಜಿಲ್ಲೆಯ ಗ್ರಾಮೀಣ ಜನತೆಯನ್ನು ರಾಜ್ಯದ ಹಾಗೂ ರಾಷ್ಟ್ರದ ಗ್ರಾಮೀಣ ಜನತೆಯೊಂದಿಗೆ ಬೆಸೆಯುವುದು ಸಾಧ್ಯವಾಗಬಹುದು.

ಒಲಂಪಿಕ್ಸ್ : ಭಯೋತ್ಪಾದಕ ಸಂಸ್ಥೆಗಳ ವ್ಯವಸ್ಥಿತ ಸಂಚುಗಳು

— ಎಡ್ಗರ್ ಚೆಪೊರೊವ್

ಲಾಸ್ ಎಂಜೆಲೀಸ್‌ನಲ್ಲಿ ನಡೆಯಲಿರುವ 23ನೇ ಬೇಸಿಗೆ ಒಲಂಪಿಕ್ ಕ್ರೀಡೆಗಳಲ್ಲಿ ಸೋವಿಯತ್ ಕ್ರೀಡಾಪಟುಗಳು ಭಾಗವಹಿಸುವುದಿಲ್ಲ ಎಂದು ಸೋವಿಯತ್ ಒಕ್ಕೂಟದ ರಾಷ್ಟ್ರೀಯ ಒಲಂಪಿಕ್ ಸಮಿತಿ (ಎನ್‌ಒಸಿ) ಕೈಗೊಂಡಿರುವ ನಿರ್ಧಾರ ಅಂತಿಮವಾದದು ಎಂದು ರಾಷ್ಟ್ರೀಯ ಒಲಂಪಿಕ್ ಸಮಿತಿಯ ಅಧ್ಯಕ್ಷ ಮರಾತ್ ಗ್ರಾಮೋವ್ ಅವರು ಇತ್ತೀಚೆಗೆ ಮಾಸ್ಕೋದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.

ಅಮೇರಿಕದ ಅಧಿಕಾರಿಗಳು ಅಂತರರಾಷ್ಟ್ರೀಯ ಒಲಂಪಿಕ್ ಸಮಿತಿ [ಐಓಸಿ] ಮತ್ತು ಲಾಸ್ ಎಂಜೆಲೀಸ್ ಒಲಂಪಿಕ್ ಕ್ರೀಡಾಕೂಟದ ವ್ಯವಸ್ಥಾಪಕ ಸಮಿತಿ [ಎಲ್‌ಎಒಒಸಿ] ಯ ಅಭಿಪ್ರಾಯಗಳಿಗೆ (ಅತಿಥೇಯ ರಾಷ್ಟ್ರದ ಬಗ್ಗೆ ಸೋವಿಯತ್ ಒಲಂಪಿಕ್ ಸಮಿತಿ ಸಲ್ಲಿಸಿದ ದೂರುಗಳಲ್ಲಿರುವ ಸತ್ಯಾಂಶವನ್ನು, ನ್ಯಾಯಬದ್ಧತೆಯನ್ನು ಅವು ಮಾನ್ಯ ಮಾಡಿದ್ದವು) ಮನ್ನಣೆ ನೀಡಲು ನಿರಾಕರಿಸಿದ ಕಾರಣ ಸೋವಿಯತ್ ಕ್ರೀಡಾಪಟುಗಳ ತಂಡವನ್ನು ಲಾಸ್ ಎಂಜೆಲೀಸ್‌ಗೆ ಕಳುಹಿಸದಿರುವ ಕಠಿಣ ನಿರ್ಧಾರವನ್ನು ರಾಷ್ಟ್ರೀಯ ಒಲಂಪಿಕ್ ಸಮಿತಿ ಕೈಗೊಳ್ಳಬೇಕಾಯಿತು.

ಲಾಸ್ ಎಂಜೆಲೀಸ್ ಕ್ರೀಡಾಕೂಟದಲ್ಲಿ ಭಾಗವಹಿಸಲಿರುವ ಸೋವಿಯತ್ ಕ್ರೀಡಾಪಟುಗಳ ಸಂರಕ್ಷಣೆ ಬಗ್ಗೆ ಖಾತ್ರಿ ದೊರಕಬೇಕು ಹಾಗೂ ಅಲ್ಲಿನ ಎಲ್ಲಾ ಉಗ್ರಗಾಮಿ ತಂಡಗಳು ನಡೆಸುತ್ತಿರುವ ಸೋವಿಯತ್-ವಿರೋಧಿ ಚಟುವಟಿಕೆಗಳು ತಕ್ಷಣ ನಿಲ್ಲಬೇಕು ಎಂದು ಸೋವಿಯತ್ ಒಕ್ಕೂಟ ಕೇಳಿಕೊಂಡಿತು. ಈ ಕೇಳಿಕೆಗಳು "ಅಸಮರ್ಥನೀಯ" ವಾದವು ಎಂದು ಅಮೇರಿಕದ ವಿದೇಶಾಂಗ ಇಲಾಖೆ ಅವನ್ನು ತಿರಸ್ಕರಿಸಿತು. ಹೀಗಾದ ಬಳಿಕವೂ ಸೋವಿಯತ್ ಕ್ರೀಡಾಪಟುಗಳ ತಂಡ ಲಾಸ್ ಎಂಜೆಲೀಸ್ ಕ್ರೀಡೆಗಳಲ್ಲಿ ಪಾಲುಗೊಳ್ಳಲು ಸಾಧ್ಯವೇ ?

ಲಾಸ್ ಎಂಜೆಲೀಸ್ ಒಲಂಪಿಕ್ ಕ್ರೀಡೆಗಳಲ್ಲಿ ಭಾಗವಹಿಸಲು ಬರುವ ಸೋವಿಯತ್ ಕ್ರೀಡಾಪಟುಗಳಿಗೆ ಕಿರುಕುಳ ನೀಡಲು ದೈಹಿಕವಾಗಿ ಹಾನಿಯುಂಟು ಮಾಡಲು ಅವರನ್ನು ಅಪಹರಿಸಲು ಅಮೇರಿಕದ ಸುಮಾರು ನೂರು ಭಯೋತ್ಪಾದಕ ಸಂಸ್ಥೆಗಳು ಸಿದ್ಧತೆಗಳನ್ನು ನಡೆಸುತ್ತಿವೆ ಎಂದು ಅಮೇರಿಕದ ಪತ್ರಿಕೆಗಳೇ ವರದಿ ಮಾಡಿವೆ. ಸೋವಿಯತ್ ಪ್ರಜೆಗಳ ವಿರುದ್ಧ ಪ್ರಚೋದನೆ ಕೃತ್ಯಗಳನ್ನು ಎಸಗುವ ಉದ್ದೇಶದಿಂದ ಲಾಸ್ ಎಂಜೆಲೀಸ್‌ನಲ್ಲಿ ನೂರಾರು ರಹಸ್ಯ ತಾಣಗಳನ್ನು ವ್ಯವಸ್ಥೆಗೊಳಿಸಲಾಗಿತ್ತು. "ಸೋವಿಯತ್ ಜನರನ್ನು ನಿಷೇಧಿಸಿ" ಎಂಬ ಸಂಘಟನೆಯೊಂದು "ರಷ್ಯನರನ್ನು ಕೊಲ್ಲಿರಿ" ಎಂಬ ಒಕ್ಕಣೆಗಳುಳ್ಳ ನೂರಾರು ಸಾವಿರಾರು ಕರಪತ್ರಗಳನ್ನು ಬ್ಯಾಡ್ಜ್‌ಗಳನ್ನು ತಯಾರಿಸಿತ್ತು.

ಇಂತಹ ಘೋಷಣೆಗಳನ್ನು ರೂಪಿಸಿದವರಿಗೆ ವಾಷಿಂಗ್ಟನ್‌ನ ಅಧಿಕಾರಿಗಳು ಬಹಿರಂಗವಾಗಿಯೇ ಪ್ರೋತ್ಸಾಹ ನೀಡಿದ್ದರು ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. "ಅಮೇರಿಕದ ಅಧಿಕಾರಿಗಳಿಗೆ ಭಯೋತ್ಪಾದಕರನ್ನು ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವಾಗದು" ಎಂದು ಅಮೇರಿಕದ ವಿದೇಶಾಂಗ ಇಲಾಖೆ ಘೋಷಿಸಿತ್ತು. ವಾಸ್ತವವಾಗಿ ಭಯೋತ್ಪಾದಕರನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಶಕ್ತಿ ಅವರಿಗಿದೆ. ಆದರೆ ಅವರನ್ನು ನಿಯಂತ್ರಿಸುವ ಬದಲು ಅವರ ಚಟುವಟಿಕೆಗಳಿಗೆ ಅಧಿಕಾರಿಗಳು ಮಾರ್ಗದರ್ಶನ ನೀಡುವ ಮಟ್ಟಕ್ಕೆ ತಲುಪಿದ್ದರು. ಒಲಂಪಿಕ್ ಕ್ರೀಡೆಗಳ ವ್ಯವಸ್ಥಾಪಕ ಸಮಿತಿಯಲ್ಲಿ ಭಯೋತ್ಪಾದಕ ಸಂಸ್ಥೆಗಳ ಹಾಗೂ ಉಗ್ರಗಾಮಿ ಸಂಸ್ಥೆಗಳ ಪ್ರತಿನಿಧಿಗಳನ್ನು ಅಮೇರಿಕದ ಬೇಹುಗಾರಿಕೆ ಸಂಸ್ಥೆಗಳು ಇರಿಸಿದ್ದವು ಎಂದು ಮಾಸ್ಕೋದ ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟಪಡಿಸಲಾಯಿತು. ಒಲಿಂಪಿಕ್‌ನಲ್ಲಿ ಭಾಗವಹಿಸಲು ಹೋದ ಸೋವಿಯತ್ ನಾಗರಿಕರು ಮರಳಿ ತಮ್ಮ ತಾಯ್ನಾಡಿಗೆ ಹಿಂತಿರುಗದಂತೆ ಮಾಡಲು ಅವರ ನರಮಂಡಲ ವ್ಯವಸ್ಥೆಯ ಮೇಲೆ ತೀವ್ರ ದುಷ್ಪರಿಣಾಮ ಬೀರುವ, ಮನಃಪರಿವರ್ತನೆಗೊಳಿಸುವ ಮನೋವೈಜ್ಞಾನಿಕ ಔಷಧಿಗಳನ್ನು ಈ ಭಯೋತ್ಪಾದಕ ಸಂಸ್ಥೆಗಳು ಸಿದ್ಧಪಡಿಸಿದ್ದವು. ಕ್ರೀಡಾಪಟುಗಳನ್ನು ಅಪಹರಿಸುವ ತಂತ್ರವನ್ನೂ ಅವು ಯೋಜಿಸಿದ್ದವು.

ಲಾಸ್ ಏಂಜೆಲಿಸ್ ಒಲಂಪಿಕ್‌ಗೆ ಅಮೇರಿಕದಲ್ಲಿ ಸಿದ್ಧತೆಗಳು ಆರಂಭವಾದಂದಿನಿಂದಲೇ ಒಲಂಪಿಕ್ ಕ್ರೀಡೆಗಳ ಮಹಾನ್ ಧ್ಯೇಯ ಆದರ್ಶಗಳನ್ನು ಭಂಗಗೊಳಿಸುವ ಚಟುವಟಿಕೆಗಳಿಗೂ ಅಲ್ಲಿ ಸಿದ್ಧತೆ ಆರಂಭವಾಯಿತು. ಆದರೆ ಅಮೇರಿಕದ ನಾಯಕರು ಸೋವಿಯತ್ ಒಕ್ಕೂಟವನ್ನು ಆರೋಪಿಸುತ್ತಿದ್ದಾರೆ. 1980 ರ ಒಲಂಪಿಕ್ ಕ್ರೀಡೆಗಳನ್ನು ಅಮೇರಿಕ ಬಹಿಷ್ಕರಿಸಿದುದಕ್ಕೆ ಪ್ರತಿಯಾಗಿ ರಷ್ಯನರು ಈಗ ಸೇಡು ತೀರಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸುತ್ತಿದ್ದಾರೆ. ಆದರೆ ವಸ್ತುಸ್ಥಿತಿ ಹಾಗಿಲ್ಲ, ಸೋವಿಯತ್ ಕ್ರೀಡಾಪಟುಗಳಿಗೆ ಲಾಸ್ ಏಜೆಂಲಿಸ್ ಕ್ರೀಡಾಕೂಟದಲ್ಲಿ ಭಾಗವಹಿಸಬೇಕೆನ್ನುವ ಪ್ರಾಮಾಣಿಕ ಆಸಕ್ತಿಯಿತ್ತು. ಅದಕ್ಕಾಗಿ ಅವರು ಬಹಳ ಪರಿಶ್ರಮದಿಂದ ಸಿದ್ಧತೆಗಳನ್ನು ನಡೆಸುತ್ತಿದ್ದರು. ಕ್ರೀಡೆಗಳ ದೂರದರ್ಶನ ಪ್ರಸಾರಕ್ಕಾಗಿ ಸೋವಿಯತ್ ಒಕ್ಕೂಟ ಮಿಲಿಯಗಟ್ಟಳೆ ಡಾಲರ್ ನೀಡಿತ್ತು. ಆದುದರಿಂದ ಕ್ರೀಡೆಗಳಲ್ಲಿ ಸೋವಿಯತ್ ಕ್ರೀಡಾಪಟುಗಳು ಭಾಗವಹಿಸದಿರುವ ಉದ್ದೇಶ ಸೇಡು ತೀರಿಸಿಕೊಳ್ಳುವುದಲ್ಲ ಅಥವಾ ಕ್ರೀಡೆಗಳನ್ನು ಅವರು ಬಹಿಷ್ಕರಿಸಿಲ್ಲ. ಅಮೇರಿಕ ಈ ಹಿಂದೆ ವರ್ತಿಸಿದಂತೆ ಸೋವಿಯತ್ ಒಕ್ಕೂಟ ನಿರ್ಧಾರ ಕೈಗೊಳ್ಳುವ ಮೂಲಕ ಯಾರಿಗೂ "ನಿರ್ಬಂಧ" ವಿಧಿಸುವ ಬೆದರಿಕೆಯೊಡ್ಡಿಲ್ಲ ಮತ್ತು ಕ್ರೀಡೆಗಳನ್ನು ಬಹಿಷ್ಕರಿಸಲು ಯಾರನ್ನೂ ಒತ್ತಾಯಿಸುತ್ತಿಲ್ಲ. ಸೋವಿಯತ್ ವ್ಯಾಪಾರೀ ಸಂಸ್ಥೆಗಳು ಒಲಿಂಪಿಕ್ ಕ್ರೀಡೆಗಳ ವ್ಯವಸ್ಥಾಪಕರೊಂದಿಗೆ ಮಾಡಿಕೊಂಡ ಕಟ್ಟುಪಾಡುಗಳನ್ನು ಪೂರ್ತಿಯಾಗಿ ಪಾಲಿಸುತ್ತವೆ.

ಸೋವಿಯತ್ ಒಕ್ಕೂಟವು ಕ್ರೀಡೆಗಳನ್ನು ಬಹಿಷ್ಕರಿಸಿತು ಎಂದು ಆರೋಪ ಹೊರಿಸುವ ಮೂಲಕ ವಾಷಿಂಗ್ಟನ್ ಆಡಳಿತ ಅಮೇರಿಕದ ಮಾನದಂಡದಿಂದ ಸೋವಿಯತ್ ನೀತಿಯನ್ನು ಅಳೆಯುತ್ತಿದೆ ಹಾಗೂ ವಿಶ್ವದ ಜನತೆಯನ್ನು ವಂಚಿಸಲು ಪ್ರಯತ್ನಿಸುತ್ತಿದೆ.

ಕೃಪೆ: "ಸೋವಿಯತ್ ಲೇಖನ ಮಾಲೆ"

ಐಕ್ಯರಂಗಕ್ಕೆ ಚಂದಾದಾರರಾಗಿರಿ

ವಾರ್ಷಿಕ ಚಂದಾ-30 00

ಅರ್ಧ ವಾರ್ಷಿಕ ಚಂದಾ 15-00

ಮಂಗಳೂರಿನಲ್ಲಿ ಯಶಸ್ವೀ ಸಿಐಟಿಯು ಸಮ್ಮೇಳನ

[ಮೊದಲನೇ ಪುಟದಿಂದ]

ಕರ್ನಾಟಕ ಪ್ರಾಂತ ರೈತ ಸಂಘವು ನಡೆಸುವ ಚಳುವಳಿಗೆ ಸೌಹಾರ್ದ ಬೆಂಬಲ ಕೊಡಲು 1984 ಜೂನ್ 11 ರಂದು ಸಿಐಟಿಯು ಸದಸ್ಯರು ಸಾರ್ವತ್ರಿಕ ಮುಷ್ಕರವನ್ನು ನಡೆಸಬೇಕೆಂದು, ಪಿಕೆಟಿಂಗ್ ಮಾಡಿ ಜೈಲಿಗೆ ಹೋಗಬೇಕೆಂದು ಸಮ್ಮೇಳನವು ಕರೆಕೊಟ್ಟಿದೆ.

ಬೆಲೆ ಏರಿಕೆ, ನಿರುದ್ಯೋಗ, ವಿಭಜನಕಾರಿ ಶಕ್ತಿಗಳು, ಶ್ರೀಲಂಕಾ ಘಟನೆಗಳು, ಕೆ. ಜಿ. ಎಫ್. ಚಿನ್ನಕ್ಕೆ ಕೇಂದ್ರ ಸರ್ಕಾರ ಕೊಡುತ್ತಿರುವ ಬೆಲೆ, ಜೀವ ವಿಮಾ ನಿಗಮವನ್ನು ಒಡೆಯುವುದರ ವಿರುದ್ಧ, ಅಣುಯುದ್ಧದ ವಿರುದ್ಧ, ಪಶ್ಚಿಮ ಬಂಗಾಳ, ತ್ರಿಪುರ, ವಿಜಯನಗರದ ಉಕ್ಕಿನ ಕಾರ್ಖಾನೆ ಆಟೋರಿಕ್ಷಾ ಚಾಲಕರ ಬೇಡಿಕೆಗಳು ಮೊದಲಾದ ವಿಷಯಗಳ ಮೇಲೆ ಸಮ್ಮೇಳನವು ನಿರ್ಣಯಗಳನ್ನು ಅಂಗೀಕರಿಸಿತು.

ಮುಂದಿನ ಅವಧಿಗೆ 105 ಸದಸ್ಯರ ರಾಜ್ಯ ಮಂಡಳಿ, 33 ಸದಸ್ಯರ ರಾಜ್ಯ ಸಮಿತಿಯನ್ನು, ಪದಾಧಿಕಾರಿಗಳನ್ನು ಎಸ್. ಸೂರ್ಯನಾರಾಯಣರಾವ್, ಅಧ್ಯಕ್ಷರು, ಸಿ. ನಂಜುಂಡಪ್ಪ ಪ್ರಧಾನ ಕಾರ್ಯದರ್ಶಿ, ಎನ್. ಕೆ. ಉಪಾಧ್ಯಾಯ, ಖಜಾಂಚಿ, ಕೆ ಮೂಸಬ್ಬ ಮತ್ತು ಮಹಮದ್ ದಸ್ತಗೀರ್, ಉಪಾಧ್ಯಕ್ಷರು, ವಿ. ಜೆ. ಕೆ. ನಾಯರ್ ಮತ್ತು ಬಿ. ಮಾಧವ, ಕಾರ್ಯದರ್ಶಿಗಳಾಗಿ ಸಮ್ಮೇಳನವು ಚುನಾಯಿಸಿತು.

ಸಮ್ಮೇಳನದ ಮುಕ್ತಾಯ ಭಾಗವಾಗಿ 17 ರ ಸಂಜೆ ವರ್ಣರಂಜಿತ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆಗಳು ಮಂಗಳೂರಿನಲ್ಲಿ ನಡೆದುವು. ಮೆರವಣಿಗೆಯ ಮುಂಭಾಗದಲ್ಲಿ ಕೆಂಪು ಸಮವಸ್ತ್ರ ಧರಿಸಿದ ನೂರಾರು ಸ್ವಯಂ ಸೇವಕರು ಅವರ ಹಿಂದುಗಡೆ ಕೆಂಪು ಸೀರೆಯುಟ್ಟ ಸ್ವಯಂ ಸೇವಕಿಯರು ನಂತರ ಹೊಸದಾಗಿ ಆಯ್ಕೆಯಾದ ರಾಜ್ಯ ಸಮಿತಿ ಸದಸ್ಯರು ಅಲ್ಲದೆ ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಬಂದಿದ್ದ ಕಾರ್ಮಿಕರು ತಮ್ಮ ತಮ್ಮ ಬ್ಯಾನರುಗಳನ್ನು ಹಿಡಿದು ಮೆರವಣಿಗೆಯಲ್ಲಿ ಬಂದರು ಅದರಲ್ಲಿ ಬೆಂಗಳೂರಿನ ವಿವಿಧ ಕಾರ್ಖಾನೆಗಳ ಕಾರ್ಮಿಕರು, ಹರಿಹರದ ಕಿರ್ಲೋಸ್ಕರ್, ದಾಂಡೇಲಿಯ ಫೆರೋ ಅಲಾಯ್ಸ್, ಬಿ.ಡಿ.ಕೆ. ಪೇಪರ್ ಮಿಲ್ಲುಗಳ ಕಾರ್ಮಿಕರು, ಹುಬ್ಬಳ್ಳಿಯ ಸುಂದರತ್ತಾ ಕಾರ್ಮಿಕರು, ಕೆ. ಜಿ. ಎಫ್. ನ ಚಿನ್ನದ ಗಣಿ ಕಾರ್ಮಿಕರು ಪ್ರತ್ಯೇಕ ಬಸ್ಸುಗಳಲ್ಲಿ ಮೆರವಣಿಗೆಗೆ ಆಗಮಿಸಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶಾಸಕ ಪಿ. ರಾಮಚಂದ್ರರಾವ್ ಸ್ವಾಗತ ಭಾಷಣ ಮಾಡಿದರು. ಎಸ್. ಸೂರ್ಯನಾರಾಯಣರಾವ್ ಅಧ್ಯಕ್ಷತೆ ವಹಿಸಿದ್ದ ಸಭೆಯನ್ನುದ್ದೇಶಿಸಿ ಬಿ. ಟಿ. ರಣದಿವೆ, ಅವರು ದೇಶದ ಆರ್ಥಿಕ, ರಾಜಕೀಯ ಪರಿಸ್ಥಿತಿಗಳನ್ನು ವಿಶ್ಲೇಷಿಸುತ್ತಾ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ [ಐ] ಪಕ್ಷವನ್ನು ಸೋಲಿಸಬೇಕೆಂದು ರಾಜ್ಯದ ಕಾರ್ಮಿಕ ವರ್ಗಕ್ಕೆ ಕರೆ ನೀಡಿದರು. ಸಿ. ನಂಜುಂಡಪ್ಪ, ವಿ. ಜೆ. ಕೆ. ನಾಯರ್ ಮತ್ತು ಎನ್. ಕೆ. ಉಪಾಧ್ಯಾಯ ಭಾಷಣ ಮಾಡಿದರು. ಬಿ. ಮಾಧವರು ವಂದಿಸಿದರು.

ಈ ಮೂರು ವರ್ಷಗಳಲ್ಲಿ ರಾಜ್ಯದ ಸಿಐಟಿಯು ಸದಸ್ಯತ್ವವು ಶೇ. 25 ರಷ್ಟು ಹೆಚ್ಚಾಗಿರುವುದು ಗಮನಿಸಬೇಕಾದ ವಿಷಯವಾಗಿದೆ.

ಅರುಣ್ ಶೌರಿಗೆ ಉತ್ತರ

ಇತ್ತೀಚೆಗೆ "ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ" ಎಂಬ ಆಂಗ್ಲ ಪತ್ರಿಕೆಯಲ್ಲಿ ಅರುಣ್ ಶೌರಿ ಎಂಬ ಪತ್ರಕರ್ತರೊಬ್ಬರು ಎರಡನೆಯ ಮಹಾಯುದ್ಧದ ಅವಧಿಯಲ್ಲಿ ಭಾರತದ ಕಮ್ಯೂನಿಸ್ಟ್ ಪಕ್ಷ ವಹಿಸಿತೆಂದು ಹೇಳಲಾದ ಪಾತ್ರದ ಬಗ್ಗೆ ಬರೆದಿರುವ ಲೇಖನಗಳಿಗೆ ಸಿ. ಪಿ. ಐ. (ಎಂ) ನ ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ. ಎಂ. ಬಸವಪುನ್ನಯ್ಯ ನವರು ಉತ್ತರ ರೂಪವಾಗಿ ನಾಲ್ಕು ಭಾಗಗಳಲ್ಲಿ ಬರೆಯುವ ಲೇಖನಗಳನ್ನು "ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ" ಪತ್ರಿಕೆ ತನ್ನ ಜೂನ್ 3 ನೇ ತಾರೀಕಿನ ಸಂಚಿಕೆಯಿಂದ ಪ್ರಕಟಿಸಲು ಒಪ್ಪಿಕೊಂಡಿದೆ ಎಂಬುದಾಗಿ ಪೊಲಿಟ್ ಬ್ಯೂರೋ ಪ್ರಕಟನೆ ತಿಳಿಸಿದೆ.

ಮೇಲ್ಕಂಡ ಪತ್ರಿಕೆಯಲ್ಲಿ ಕಾಂ. ಬಸವ ಪುನ್ನಯ್ಯ ಅವರ ಲೇಖನ ಪ್ರಕಟವಾದ ನಂತರ ಜೂನ್ 10 ರ ಐಕ್ಯರಂಗ ಸಂಚಿಕೆಯಲ್ಲಿ ಅದರ ಕನ್ನಡ ಅನುವಾದವನ್ನು ಪ್ರಕಟಿಸಲಾಗುವುದು.

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore-560053. Editorial and managerial office, L-56, K V. Temple Street, Sultanpet. B-53. Phone : 24154
Editor : P. Ramachandra Rao
Managing Editor : N. K. Upadhyaya